ಬೆಳಸಲಿಗೆ ಕೃತಿಸಂಪುಟ-೧

(ಯಕ್ಷಗಾನ ಪ್ರಸಂಗಗಳು)

* ಚ್ಯವನ - ಸುಕನ್ಯಾ
* ದುಷ್ಯಂತ - ಶಕುಂತಲಾ
* ಗಂಗಾವತರಣ
* ಆಂಜನೇಯು ಪರಾಜಯು
* ಕೌಂತೇಯು ಕರ್ಣ

ಬೆಳಸಲಿಗೆ ಗಣಪತಿ ಹೆಗಡೆ

ಬೆಳಸಲಿಗೆ ಕೃತಿಸಂಪುಟ-೧

(ಯಕ್ಷಗಾನ ಪ್ರಸಂಗಗಳು)

ಬೆಳಸಲಿಗೆ ಗಣಪತಿ ಹೆಗಡೆ

ಪ್ರಕಾಶಕರು

ದಿ॥ ಬೆಳಸಲಿಗೆ ಗಣಪತಿ ಹೆಗಡೆ ಕೃತಿ ಪ್ರಕಾಶನ

ಎ. ಪಿ. ಎಂ. ಸಿ. ರಸ್ತೆ, ಸಿದ್ದಾಪುರ (ಉ.ಕ.) 581 355

ಬುಕ್ ಸೆಂಟರ್
ದೂರವಾಣಿ
425161

BELASALIGE KRUTHI SAMPUTA
By Belasalige Ganapathi Hegde. Published by Belasalige Ganapathi Hegde, Kruthi Prakashana Siddhapura, (U.K.) 581 355
Printed at Sagar Mudrana, SAGAR-577401 oct.99
Pages : 182+8

ಪೂರ್ಣಹಕ್ಕು : ಶ್ರೀ ಸುರೇಶ ಗಣಪತಿ ಹೆಗಡೆ ಬೆಳಸಲಿಗೆ

ಬೆಲೆ : 70-00

ಪುಸ್ತಕಗಳು ದೊರೆಯುವ ಸ್ಥಳ

ಶ್ರೀ ಸುರೇಶ ಗಣಪತಿ ಹೆಗಡೆ
ಬೆಳಸಲಿಗೆ
ಪೋ : ಗೋಳಗೋಡು
ಸಿದ್ದಾಪುರ (ಉ.ಕ.)

ಪ್ರಕಾಶಕರ ಮಾತು

ದಿ॥ ಬೆಳಸಲಿಗೆ ಗಣಪತಿ ಹೆಗಡೆಯವರು (೧೯೦೩-೧೯೫೮) ಯಕ್ಷಗಾನರಂಗದ ಎಲ್ಲ ವಿಭಾಗಗಳಲ್ಲಿಯೂ ಪರಿಣತಿಯನ್ನು ಹೊಂದಿದ್ದ ವ್ಯಕ್ತಿ. ಯಕ್ಷಗಾನಕ್ಕಾಗಿ ಅಪಾರವಾದ ತ್ಯಾಗವನ್ನು ಮಾಡಿದವರು. ಆ ಕಲೆಯನ್ನು ನಂಬಿ ಗಳಿಸಿದ್ದಕ್ಕಿಂತ ಕಳೆದುಕೊಂಡುದೇ ಹೆಚ್ಚಾಗಿರುವಾಗಲೂ ಯಕ್ಷಗಾನದ ಮೇಲಿನ ಪ್ರೀತಿಯನ್ನು ಸ್ವಲ್ಪವೂ ಕಳೆದುಕೊಂಡಿರಲಿಲ್ಲ. ಕೊನೆಯುಸಿರಿರುವವರೆಗೆ ಕಲೆಯ ಬಗೆಗಿನ ನಿಷ್ಠೆ ಸಡಿಲವಾಗಲಿಲ್ಲ.

ಬೆಳಸಲಿಗೆಯವರ ಕವಿತ್ವ ಶಕ್ತಿಯು ಶ್ರೇಷ್ಠ ಮಟ್ಟದ್ದು. ಯಕ್ಷಗಾನದ ಸಾರ್ವಕಾಲಿಕ ಶ್ರೇಷ್ಠ ಕವಿಗಳ ಪಂಕ್ತಿಗೆ ಸೇರಲು ಅವರು ಅರ್ಹರು. ಅವರು ಉತ್ತಮವಾದ ಇಪ್ಪತ್ತಾರು ಪ್ರಸಂಗಗಳನ್ನು ರಚಿಸಿದ್ದಾರಾದರೂ ಪ್ರಕಟಗೊಂಡವು ಕೇವಲ ಎರಡು–ಸಂಪೂರ್ಣ ರಾಮಾಯಣ ಹಾಗೂ ಸಮಗ್ರ ಭಾರತ. ಇತರ ಎಲ್ಲ ಕೃತಿಗಳನ್ನೂ ಪ್ರಕಟಿಸುವ ಹಂಬಲವಿತ್ತಾದರೂ ಕಾರಣಾಂತರಗಳಿಂದ ಅದು ಸಾಧ್ಯವಾಗಲಿಲ್ಲ.

ಅವರು ಜೀವಂತವಾಗಿದ್ದಾಗ ಪ್ರಸಂಗಗಳನ್ನು ಪ್ರಕಟಿಸುವ ಯೋಜನೆಯನ್ನು ಹಾಕಿಕೊಳ್ಳಲಾಗಿತ್ತಾದರೂ ಅದು ಕೃತಿರೂಪಕ್ಕಿಳಿಯುವ ಮುನ್ನವೇ ಅವರು ದಿವಂಗತರಾದರು. ಗತಿಸಿದ ಕಲಾವಿದನ ಕೃತಿಗಳನ್ನು ಪ್ರಕಟಿಸುವ ಮೂಲಕ ನಮ್ಮ ಶ್ರದ್ಧಾಂಜಲಿಯನ್ನರ್ಪಿಸಬೇಕೆಂಬ ಗುರಿಯನ್ನಿಟ್ಟುಕೊಂಡು "ದಿ॥ ಬೆಳಸಲಿಗೆ ಗಣಪತಿ ಹೆಗಡೆ ಕೃತಿ ಪ್ರಕಾಶನ ಸಿದ್ದಾಪುರ (ಉ.ಕ.)" ಎಂಬ ಹೆಸರಿನ ಸಂಸ್ಥೆಯೊಂದನ್ನು ಸ್ಥಾಪಿಸಿಕೊಂಡು ಸಾರ್ವಜನಿಕರ ನೆರವಿನಿಂದ ಅವರ ಅಚ್ಚಾಗದ ಎಲ್ಲ ಕೃತಿಗಳನ್ನೂ ಪ್ರಕಟಿಸಲು ಹೊರಟಿದ್ದೇವೆ. ಈ ಪ್ರಯತ್ನದ ಫಲವಾಗಿ ಪ್ರಥಮ ಸಂಪುಟ ತಮ್ಮ ಕೈಯಲ್ಲಿದೆ.

ಈ ಸಂಪುಟವನ್ನು ಅಂದವಾಗಿ ಮುದ್ರಿಸಿಕೊಟ್ಟ ಸಾಗರ ಮುದ್ರಣ, ಕರಡು ತಿದ್ದಲು ನೆರವಾದ ಅಮಚಿ ಲಕ್ಷ್ಮೀನಾರಾಯಣರಾವ್, ಸಾಗರ, ಕೃತಿ ಪ್ರಕಟಣೆಯ ವಿವಿಧ ಹಂತಗಳಲ್ಲಿ ನೆರವು ನೀಡಿದ ಪ್ರೊ. ಎಸ್. ಆರ್. ನಾಗರಾಜ, ಪ್ರೊ. ಎಂ. ಎಸ್. ವಿನಾಯಕ ಇವರುಗಳಿಗೂ, ಧನ ಸಹಾಯವನ್ನು ನೀಡಿ ಪ್ರೋತ್ಸಾಹಿಸಿದ ಎಲ್ಲ ಮಿತ್ರರಿಗೂ ಅನಂತ ವಂದನೆಗಳು ಸಲ್ಲುತ್ತವೆ.

ಸಿದ್ದಾಪುರ
೧೧-೧೦-೧೯೯೯

ಪ್ರಕಾಶನದ ಪರವಾಗಿ
ಆರ್. ಎಂ. ಹೆಗಡೆ, ಬಾಳೇಸರ
ಅಧ್ಯಕ್ಷರು

ಎಂ. ಎ. ಹೆಗಡೆ, ಸಿದ್ದಾಪುರ
ಕಾರ್ಯದರ್ಶಿ

ದಿ|| ಬೆಳಸಲಿಗೆ ಗಣಪತಿ ಹೆಗಡೆ ಕೃತಿ ಪ್ರಕಾಶನ

"ಮಹಾಲಕ್ಷ್ಮೀ" ಎ.ಪಿ.ಎಂ.ಸಿ. ರಸ್ತೆ, ಸಿದ್ದಾಪುರ (ಉ.ಕ.) 581355

ಶ್ರೀ ಆರ್.ಎಂ. ಹೆಗಡೆ, ಬಾಳೇಸರ	ಅಧ್ಯಕ್ಷರು
ಶ್ರೀ ಅನಂತ ಹೆಗಡೆ, ಕೊಳಗಿ	ಸದಸ್ಯರು
ಶ್ರೀ ನರಸಿಂಹ ಹೆಗಡೆ, ಹೆಬ್ಬಲಸು	,,
ಶ್ರೀ ಚಿದಂಬರ ಹೆಗಡೆ, ಕೊಪ್ಪ	,,
ಶ್ರೀ ಸುರೇಶ ಹೆಗಡೆ, ಬೆಳಸಲಿಗೆ	,,
ಶ್ರೀ ಎಂ. ಎ. ಹೆಗಡೆ, ಸಿದ್ದಾಪುರ	ಕಾರ್ಯದರ್ಶಿ

ಪಾತ್ರವರ್ಗ

೧ ಪಾತಿವ್ರತ್ಯ ಪ್ರಭಾವ
ಅರ್ಥಾತ್ ಚ್ಯವನ-ಸುಕನ್ಯಾ ೧-೪೨

ಪಾತ್ರ : ೧ ಶರ್ಯಾತಿ ೨ ಸುಮನಾ ೩ ಸುಕನ್ಯಾ ೪ ಸಖೀ(ರಶ್ಮಿ ೫ ಸುಮತಿ ೬ ವನಪಾಲಕ ೭ ಚ್ಯವನ ೮ ಕಾಕತುಂಡ ೯ ಸತ್ಯವರ್ಮ ೧೦ ಅಣಿಮಾಂಡವ್ಯ ೧೧ ವೈಶಾಲಿ (ವೇಶ್ಯೆ) ೧೨ ನಾರದ ೧೩ ದೇವೇಂದ್ರ ೧೪ ಶಚಿದೇವಿ ೧೫ ಮಹಾವಿಷ್ಣು ೧೯ ಬೃಹಸ್ಪತಿ ೧೭ ಅನಸೂಯಾ ದೇವಿ' ೧೮ ಅತ್ರಿ ೧೯ ಬ್ರಹ್ಮ ೨೦ ಮಹೇಶ್ವರ ೨೧ ಅಶ್ವಿನೀ ದೇವತೆಗಳು ೨೨ ವಸಿಷ್ಠ ೨೩ ಕರಾಳ ೨೪ ಯಜ್ಞಪುರುಷ ೨೫ ಯಮ ೨೬ ವಾಯು ೨೭ ಕುಬೇರ ೨೮ ಭೀಷಣ

ಋಷಿಗಳು, ರಾಜಭೀಮ, ಪೌರರು, ಚೋರಪಡೆ, ದಾಸಿಯವರು, ಇತ್ಯಾದಿ

೨ ದುಷ್ಯಂತ–ಶಕುಂತಲಾ ಪುಟ ೪೩–೭೪

ಪಾತ್ರ : ೧ ದೇವೇಂದ್ರ ೨ ಮೇನಕೆ ೩ ದುಷ್ಯಂತ ೪ ಪ್ರವಸು ೫ ವಿನೀತ ೬ ಜನಮೇಜಯ ೭ ಕಣ್ವ ೮ ಶಕುಂತಲಾ ೯ ಗೌತಮಿ ೧೦ ದುರ್ವಾಸ ೧೧ ಪ್ರಿಯಂವದೆ ೧೨ ಕಾಳಪ್ಪ ೧೩ ಶಾರದ್ವತ ೧೪ ಶಾರ್ಙ್ಗರವ ೧೫ ತುಕ್ರ ೧೬ ಚಂದ್ರಿ ೧೭ ಮಾರೀಚ ೧೮ ದುರ್ಜಯ

೧೯ ಕಾಲದಂಷ್ಟ್ರ ೨೦ ದೂಷಣ-ದುರ್ಧರ
೨೧ ಮಾತಲಿ ೨೨ ಸರ್ಪದಮನ ೨೩. ನಾರದ
ದೇವತೆಗಳು, ಅಥಿತಿ, ಬೇಡರು, ವನಪಾಲಕರು, ವಟುಗಳು, ಚಾರರು
ಇತ್ಯಾದಿ

೩. ಗಂಗಾವತರಣ ಪುಟ ೭೫-೧೧೦

ಪಾತ್ರ : ೧ ದೇವೇಂದ್ರ (ಇಕ್ಷ್ವಾಕು) ೨ ಚಿತ್ರಸೇನ ೩. ಅಗ್ನಿ
೪ ಯಮ (ಕಾಲದಂಷ್ಟ್ರ ದೈತ್ಯ) ೫ ವಾಯು ೯ ಕುಬೇರ
(ವ್ಯಾಘ್ರಮುಖಕಿರಾತ) ೭ ನಾರದ ೮ ಭಗೀರಥ
೯ ಸುರತಿ ೧೦ ಸುಮತಿ ೧೧ ಮಹಾಬಾಹು
೧೨ ಕುಮಾರ ರಘು ೧೩. ಸುಬಾಹು ೧೪ ಸುಕೇತು
೧೫ ಸುನೀತ ೧೬ ವಸಿಷ್ಠ ೧೭ ಬ್ರಹ್ಮ ೧೮ ಸರಸ್ವತಿ
೧೯ ಗಂಗಾ ೨೦ ಮಹೇಶ್ವರ ೨೧ ರಂಭೆ
೨೨ ಜಹ್ನುಋಷಿ ೨೩. ವರುಣ
ಚಾರಕರು. ದಾನವರು. ಗಣಿಕೆಯರು ಇತ್ಯಾದಿ

೪ ಆಂಜನೇಯ ಪರಾಜಯ ಪುಟ ೧೧೧-೧೫೭

ಪಾತ್ರ : ೧ ಸುರಥ-ಸುಕೃತಿ ೨ ಸುನೀತ ೩. ನಾರದ
೪ ಯಮಧರ್ಮ ೫ ಸುಹರ್ಷ ೬ ಹರ್ಷ ೭ ಶ್ರೀರಾಮ
೮ ಸುಮಂತ್ರ ೯ ಅಗಸ್ತ್ಯ ೧೦ ವಸಿಷ್ಠ ೧೧ ಶತ್ರುಘ್ನ
೧೨ ಪುಷ್ಕಳ ೧೩. ಲಕ್ಷ್ಮೀನಿಧಿ ೧೪ ಆಂಜನೇಯ
೧೫ ಅಂಗದ ೧೯ ಜಾಂಬವ ೧೭ ಸುಗ್ರೀವ
೧೮ ದುರ್ಮುಖಿ ೧೯ ರತ್ನಪ್ರಭೆ ೨೦ ಮಾಲಿನಿ

೨೧ ಕರಂಡಕಾಸುರ ೨೨ ಅಜ್ಞಾತಮುನಿ
೨೩. ಸುದರ್ಶನ ೨೪ ಸುಧನ್ವ ೨೫ ಸುಪ್ರಭೆ ೨೬ ದೂತಿ
೨೭ ಲೀಲಾವತಿ
ಹಾಗೂ ಚಾರಕರು, ಕಿರಾತರು, ಯಮದೂತರು. ಸ್ತ್ರೀಯರು ಇತ್ಯಾದಿ

ಸುರಥನ ಪುತ್ರರು
೧ ಸುದರ್ಶನ ೨ ಸುಧಲ ೩. ಸುಜೇತ ೪ ಸುಕರ್ಮ
೫ ಸುನೀತ ೬ ಸುಕೇತ ೭ ಸುಮನ ೮ ಸುಲಕ್ಷಣ
೯ ಚಂಪಕ ೧೦ ಸುಧನ್ವ

೬ ಧರ್ಮ ಸಂಕಟ ಅರ್ಥಾತ್
ಕೌಂತೇಯ ಕರ್ಣ ಪುಟ ೧೫೭-೧೮೨

ಪಾತ್ರ : ೧ ಕರ್ಣ ೨ ಕೃಷ್ಣ ೩. ಕುಂತಿ ೪ ದುರ್ಯೋಧನ
೫ ಭಾನುಮತಿ ೬ ಗಾಂಧಾರಿ ೭ ಭೀಷ್ಮ ೮ ವಿಕರ್ಣ
೯ ಸೂರ್ಯ ೧೦ ಗಂಗಾದೇವಿ ೧೧ ಚಾರಕ
೧೨ ಧೃತರಾಷ್ಟ್ರ

ಆಂಜನೇಯ ಪರಾಜಯ

ಭಾಮಿನಿ

ಕರಿವದನ ವಾಗ್ದೇವಿ ಗುಹ ಸರ । ಸಿರುಹಭವ ಸಿರಿ ಹರಿಯುಮಾಶಂ। ಕರರ ಪೊಡಮಟ್ಟಿಂದ್ರ ಮುಖ್ಯಾಮರರ ಕೊಂಡಾಡಿ ॥ ಗುರುವಿನಮಲ ಪದಾರವಿಂದವ । ಸ್ಮರಿಸಿ ಕವಿಗಳ ನುತಿಸಿ ಹಿರಿಯರ । ಚರಣಕಾನತನಾಗಿ ಹನುಮಂಯ ಚರಿತೆಯಿದನೊರೆವೆ ॥೧॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ಮುನಿಪ ವಾತ್ಸ್ಯಾಯ ನಗೆ ಫಣಿಪತಿ । ಯನುಪಮಿತ ರಾಮಾಶ್ವಮೇಧವ ॥ ಸನುಮತದೊಳನುವದಿಸುತಿರೆ ಯತಿ । ಮಣಿದುಸುರ್ದ ॥೧॥ ಹರಿಗೆ ದುರಿತವದೆಲ್ಲಿ ಹನುಮನ । ಪರಿಭವಿಸಿ ಶತ್ರುಘ್ನ ಮುಖ್ಯರ । ಸೆರೆವಿಡಿವ ಬಲುಹೆಂತು ಸುರಥಗೆ । ದೊರಕಿತೆಂದು ॥೨॥ ಬಿತ್ತರದಿ ಪೇಳೆನುತ ಮುನಿ ಮಗು । ಉತ್ತಮಾಂಗವ ಪದ ಕಿರಿಸೆ ಪಿಡಿ । ದೆತ್ತಿ ಬಣ್ಣಿಸುತಿರ್ದ ಫಣಿಪತಿ । ಯುತ್ಸವದೊಳು ॥೩॥

ವಾರ್ಧಿಕ್ಯ

ಕೃತಯುಗದಿ ಕುಂಡಲಾವತಿಯೆಂಬ ಪುರವಾಳು । ತತಿಬಲಾನ್ವಿತ ಸತ್ಯ
ಸಂಧ ಸುರಥಾಹ್ವಯಂ । ಸತಿ ಮೌಳಿ ಸುಕೃತಿ ಕುಲರತುನರೆನಿಪೀರ್ವ್ಯದು
ಸುತರು ಮಖಿಲೈಶ್ವರ್ಯದಿ ॥ ಆತುಲ ವೈಭವದಿ ಸಭೆಯೊಳೊಂದಿವಸ।
ಮಿತಿಯಿಲ್ಲದಿಹ ಸುಖಕೆ ವ್ಯಥಿಸಿ ಮನದಲಿ ನ್ಯಾಯ ಚತುರ ಸೌಜನ್ಯ
ಗುಣಯುತ ಸಚಿವನಾಗಿಹ ಸುಮತಿಯ ಕರೆದಿಂತೆಂದನು ॥೧॥

ರಾಗ ಕಾಂಬೋಧಿ ಝಂಪೆತಾಳ

ತೃಪ್ತಿಗಾಣದ ವಿಷಯ ವ್ಯಾಪ್ತಿ ದಿನ ದಿನ ಮರಳಿ । ವ್ಯಾಪ್ತವಹುದ
ರಿಯೆ ನಿಸ್ವಾರ ॥ ಕ್ಲುಪ್ತ ಶಾಶ್ವತಪದದ ಜ್ಞಪ್ತಿಗೊಡದಡಿಗಡಿಗೆ ।
ತಪ್ತವೀ ಮನುಜ ಸಂಸಾರ ॥೧॥ ಸುಗಮವಲ್ಲವು ಜೀವನಿಗೆ ನಿಖಿಲ
ಯೋನಿ। ಯೋನಿಗಳನುತ್ತರಿಸುತಂತ್ಯದಲಿ॥ ಮಿಗೆ ಸುಕೃತ ಫಲವೆಂಬೊ
ಲೊಗೆವ ನರ ತನುವಿದ ರೊ । ಳಪ್ಪ ಹರನ ಪದವ ಜ್ಞಾನದಲಿ ॥೨॥
ಪೊಂದ ಬೇಕದನುಳಿದು ಮಂದಮತಿಯಲಿ ವಿಷಯ । ಬಂಧದಲಿ ಸಿಲುಕಿ
ಮರುಕೊಳಿಸಿ ॥ ಪಿಂದಣಂದದೆ ಭವದಿ । ಬೆಂದು ಬೇಗುದಿಗೊಂಬ ।
ನೆಂದು ಸಾರಿಹುದು ಶ್ರುತಿ ತಿಳಿಸಿ ॥೩॥

ಭಾಮಿನಿ

ತಡೆಯು ಪರಕೀ ಭೋಗ ಭಾಗ್ಯದ। ತೊಡಕನೊಲ್ಲೆನು ಸುತಗೆ ರಾಜ್ಯವ।
ಕೊಡುವೆ ಮೇಲಧಿಕಾರ ನಿನ್ನದು ಬಿಡದೆ ಧರ್ಮದಲಿ ॥ ನಡೆಸಿಕೊಂಬು
ದು ನೀನೆನುತ್ತಿರೆ । ಜಡಜ ಪತ್ರಾಂಬಕನ ನಾಮವ । ನುಡಿವ ಮಹ
ತಿಯ ಪಿಡಿದು ನಾರದನೊಡನೆ ವೈದೋರ್ದ ॥೧॥

ರಾಗ ಕೇದಾರಗೌಳ ಅಷ್ಟತಾಳ

ದಿವಿಜ ತಾಪಸನ ಕಂಡವನೀಶನಿದಿರೆದ್ದು । ತವಕದಿ ವಂದಿಸುತ ॥ ಭವ

ದೀಯ ಪಾದ ಪದ್ಮವ ನೋಡಿ ಧನ್ಯ ನೆಂ।ದವಗೆ ನಿವೇದಿಸುತ ॥೧॥ ದಿನ
ಕರ ದ್ಯುತಿಯಿಂದ ಮಿನುಗುವ ಸೌವರ್ಣ । ಮಣಿಮಯ ಪೀಠದಲಿ ॥
ಮುನಿಯನೇರಿಸಿ ಪಾದ ವನಜಕರ್ಚಿಸಿ ತೀರ್ಥ । ವನು ಪ್ರಮು
ಖಾಂಗದಲಿ ॥೨॥ ಧರಿಸಿ ದೈನ್ಯದಿ ಮಗುಳೆರಗಿ ಪೇಳಿದ ಜನ್ಮಾಂ।ತರದ
ಮಹಾಪುಣ್ಯದಿ ॥ ಚರಣ ದರ್ಶನವಾದುದರುಹಿ ಕಾರಣವನು।ದ್ಧರಿಪುದು
ಕಾರುಣ್ಯದಿ ॥೩॥ ಎನುತ ಮತ್ತೆರಗಿದ ಜನಪನ ಪಿಡಿದೆತ್ತಿ । ಮುನಿಪ
ನೆಂದನು ನಗುತ ॥ ವನಜಭವಾಂಡವ ಕ್ಷಣ ಬಿಡದಲೆದು ಸ । ಜ್ಜನರ
ತಾಪವ ನೀಗುತ ॥೪॥ ಇರುವುದೆಮ್ಮಯ ದಿನಚರಿಯದರಂತೆ ಸಂ। ಚರಿ
ಸುತರಸ ನಿನ್ನಯ ॥ ದರುಶನಗೈದು ಪೋಪರೆ ಬಂದೆ ತವಮುಖ ।
ಸೊರಗಿದ ಪರಿಯೇನಯ್ಯ ॥೫॥

ರಾಗ ಕಲ್ಯಾಣಿ ರೂಪಕತಾಳ

ಋಷಿಯೆ ಕೇಳ್ ಭೋಗ ಲಾಲಸೆಗಂತ್ಯವಿಲ್ಲದೀ । ವಿಷಯ ಕಂಜಿಹು
ದೆನ್ನ ಮನಸು ॥ ರಸೆಯಧಿಕಾರವನೆಸೆದು ಶ್ರೀಹರಿ ಪಾದ। ಬಿಸಜ
ಪೊಂದುವುದೊಂದೆ ಕನಸು ॥೧॥ ಆಗದಾಗದು ರಾಜ್ಯ ತ್ಯಾಗಕವಧಿ
ಯುಂಟು । ನೀಗಲೀಗ ನ್ಯಾಯವಹುದು ॥ ಸಾಗಲರಿದು ಸೌಖ್ಯವಾಗಿ
ಮೇದಿನಿಯೋರ್ವ । ಗಾಗಿ ಪ್ರಜರ ಕೊಂದಂತಹುದು ॥೨॥ ಭೋಜ್ಯ
ವಲ್ಲದ ವಸ್ತು ತ್ಯಾಜ್ಯವಲ್ಲವೆ ಸ್ವಾಮಿ । ರಾಜ್ಯವಾಳುವನೆನ್ನ ಸುತನು ॥
ತ್ಯಾಜ್ಯವೇನಿದೆ ಕಷ್ಟ ಭಾಜ್ಯವಾಗುವುದೆಂತು । ಪೂಜ್ಯವೇಳೆಂದನು
ಸುರಥ ॥೩॥

ಭಾಮಿನಿ

ವ್ಯರ್ಥ ಚಿಂತಿಸದಿರು ಪರಮ ಪುರು।ಷಾರ್ಥವಿದು ಧರೆಯೊಳೆ ಸರ್ವಸ।
ಮರ್ಥನೀನಿರೆ ಪುತ್ರ ತಾ ಸಮರ್ಥನೆಳೆಯನಲಾ ॥ ಮರ್ತ್ಯ ಪತಿ ಕೇಳ್

ರಾಜ್ಯ ಸೂತ್ರವ । ಪೊರ್ತು ನಡೆಸುವ ಹೊಣೆಯು ಹಿರಿದದ । ರರ್ಥ
ವನು ನಿನಗೊರೆವೆ ಭಾವಿಸು ಚಿತ್ತಶುದ್ಧಿಯಲಿ ॥೧॥

ರಾಗ ಬೇಗಡೆ ಅಷ್ಟತಾಳ

ಆಳುವರಸನು ಸುಜನ ಸುಪುತ್ರನು । ಸರ್ವಜ್ಞ ಸದ್ಗುಣ । ಶೀಲ ಸತ್
ಕುಲಭವ ಸುಶಿಕ್ಷಿತನು ॥ ಮೇಲೆ ಸೂನೃತ ಸತ್ಯ ಧರ್ಮ ವಿ । ಶಾಲ
ಮತಿನಿಷ್ಪಕ್ಷ ದುರ್ಜನ । ಕಾಲ ಸಜ್ಜನ ಪಾಲ ರಿಪುಗಜ ॥ ಶೂಲ ನಿರ
ಪೇಕ ಖಿಲ ಸಬಲನು ॥೧॥ ಅರಸಗೆಣೆಯಪ್ಪನಿತೆ ಗುಣಯುತನು ।
ನಿರ್ವ್ಯಾಜನಿಸ್ಪೃಹ । ನಿರತ ಸಜ್ಜನನಿರುವ ಮಾತ್ಯನನು ॥ ಬೆರೆದು
ಮುಂತಪ್ಪಕ್ಕ ಖಿಲ ಕೆಳ ಚಾ। ಕರರ ನೇಮಿಸುತರಸುದಂಡವ । ಧರಿಸಿ
ಧರ್ಮಾಧರುಮ ಸೂಕ್ಷ್ಮವ। ನರಿತು ರಂಜಿಸುತಿಹುದ ಪ್ರಜರನು॥೨॥
ಹಾದರವುಡಗ ಲಂಚ ಕೊಲೆ ಸುಲಿಗೆ । ಗೆಳಸುತ್ತ ದುರ್ಜನ । ರಾದವರ
ಮರ್ದಿಸುತ ಪ್ರಜೆಗಳಿಗೆ ॥ ಭೇದ ಗೈವಧಿಕಾರಿಗಳ ತುಳಿ । ದಾದಿ
ಧರ್ಮವ ಪೊರೆವಡಜ ನಿಂ । ದಾದು ಬಾಹುಜನಲ್ಪನೇ ಮಹ । ದಾದ
ಸಾಕ್ಷಾದ್ವಿಷ್ಣುವವನಿಗೆ ॥೩॥

ಭಾಮಿನಿ

ಆಳುವನನಸಮರ್ಥನಾದರೆ । ಕೋಳುಗೊಂಬರು ಬಲರು ಧರ್ಮವ ।
ಬೀಳುಗಡೆವಧಮನನು ಪ್ರಜೆಗಳು ಕಾಲಗಾಣಿಸುತ ॥ ಶೀಲ ಗುಣ
ಸಂಪನ್ನ ನನ್ನ ನೃ । ಪಾಲನನು ನಿಯಮಿಪರು ಪಟ್ಟವ । ಹಾಳುಗೆಡ
ಹಿದಪಾಪ ಹಾನಿಯು ಪೇಳ್ವೆ ಭೂಸತಿಯು ॥೧॥

ರಾಗ ಮಧುಮಾಧವಿ ತ್ರಿವುಡೆತಾಳ

ಅರಸನೊಳ್ಳಿದ ಪ್ರಬಲನಿರಲೀ । ಧರೆಯೆ ದಿವವ್ಯತ್ಯಸ್ತವಾದರೆ । ನರಕ
ಬಲವಾನ್ ಪೃಥ್ವಿಯುಹುದದ । ನೊರೆಯಲೇನು ॥ ಪರಿಯನು ॥೧॥

ತಕ್ಕುದಲ್ಲೆಳೆಯಂಗೆ ರಾಜ್ಯವ । ನಿಕ್ಕುತಲಿ ಸಂಸಾರ ಧರ್ಮವ ।
ಮಿಕ್ಕುನೀನ್ಯೆದಿದರೆ ಕಂಟಕವಕ್ಕು ಧರೆಗೆ ॥ ಸಾರಿದೆ ॥೨॥

ಭಾಮಿನಿ

ಭೂಲಲಾಮನು ನಮಿಸಿ ಮುನಿಕುಲ । ಮೌಳಿನಿನ್ನಭಿಮತವ ಮೀರೆನು।
ಬೀಳುಗೊಡೆನೊಡೆತನವ ನೀದಯಪಾಲಿಸಿನ್ನೊಂದ ॥ ಕೀಳು ಮೇಲೆನ
ದಖಿಲ ಮನುಜರ । ಮೇಳವಿಸಿ ಸದ್ಗತಿಯ ಪಡೆವ ವಿ । ಶಾಲ ಮಾರ್ಗ
ವದಾವುದೆನಗದ ಪೇಳಿಪೊರೆಯೆಂದ ॥೧॥

ರಾಗ ಕಾಂಬೋಧಿ ಅಷ್ಟತಾಳ

ರಾಮಧ್ಯಾನವ ನೇಮದಿಂದ । ಗೈದು । ಕಾಮನಯ್ಯನ ಪ್ರೇಮದಿಂದ॥
ಆಮಹವೈಕುಂಠ । ಧಾಮಂವ ಪಡೆನಿನ್ನ । ಸೀಮೆಯ ಜನಸಹಿತೀ
ಮಂತ್ರ ಬಲದಿಂದ ॥೧॥ ಹೆಂಗಳಂತ್ಯಜರು ಪಂಚಮರು । ಸಹ ।
ಕಂಗೊಳಿಪಖಿಲ ಮಾನವರು ॥ ಹಿಂಗದೆ ಭಜಿಸೆಪಾ। ಪಂಗಳಳಿಸಿ ಗತಿ ।
ಯಂಗೊಡಿಸುವ ಸರ್ವೋತ್ತುಂಗ ತಾರಕನಾಮ ॥೨॥ ‘ರಾ’ಯೆಂದು
ತೆರೆದ ಮಾತ್ರದಲಿ ।ಪಾಪ । ಬಾಯಿಂದ ಹೊರಡುತಂತ್ಯದಲಿ ॥
‘ಮಾ’ಯೆಂದು ಸಂಧಿಸೆ । ಕಾಯಪ್ರವೇಶಕು । ಪಾಯವಿಲ್ಲದೆಯಘ ।
ಮಾಯವಾಪುದು ತಿಳಿ ॥೩॥

ಭಾಮಿನಿ

ಹರಸಿ ತೆರಳಿದ ಮುನಿಪ ಸುರಥನು । ಹರಿಯ ಧ್ಯಾನಾನಂದ ವ್ರತ
ವನು । ಹರುಷದಿಂ ಕೈಗೊಂಡು ಮಂತ್ರಿಯ ಕರೆದು ನೇಮಿಸಿದ ॥ ಧರೆ
ಯಖಿಲ ಜನವ್ರಾತವಿದನಾ । ಚರಿಪುದುಳಿದರ ಶಿರವರಿವೆ ನೆ । ಚ್ಚರಿಸು
ವಿಬುಧರು ಹೋಮ ಹವನವ ಕರಿಸದಿಹುದೆಂದು ॥೧॥

ಕಂದಪದ್ಯ

ಅರಸನನೇಮವ ಸಚಿವಂ। ಧರೆಯುಗಲಕೆ ಸಾರಿಸಿದನು ಚರರಿಂದಿದನುಂ॥
ಶಿರಸಾವಹಿಸುತಲಖಿಲರು । ಹರುಷದಿ ಭಜಿಸುತಲಿರ್ದರು ಉರುಭ
ಕುತಿಯೊಳಂ ॥೧॥

ರಾಗ ಕಾಂಬೋಧಿ ಝಂಪೆತಾಳ

ತಾಮರಸ ನಯನ ನಾ । ಮಾಮೃತವ ಸವಿಯುತಾ । ಸೀಮೆಯೊಳಗ
ಖಿಲ ನರವ್ರಾತ ॥ ಕ್ಷೇಮದಿಂ ವೈಕುಂಠ । ಧಾಮಕೈದು ತಿರ್ದು । ದಾ
ಮಹಾಶ್ಚೈಮಿನಿಯೊಳತ್ತ ॥೧॥ ವಿತತ ವಿಭವದಿ ವೈವ । ಸ್ವತ ನೋಲ
ಗಂಗೊಟ್ಟು। ಕ್ಷಿತಿಯ ಜನರ ವಿಚಾರಕಾಗಿ ॥ ವ್ಯಥಿಸುತಾತನ ದೂತರತಿ
ಜವದಿ ಬಂದೆರಗೆ । ಖಿತಿಯೊಳಂತಕ ದಂಡ ತೂಗಿ ॥೨॥ ದೂತರಿರ
ನೀವೇತಕೀ ತೆರದೊಳಿಳೆಯ ಜೀ। ವಾತಿಶಯದೊಳಗೊಂದೂ ತರದೇ ।
ಪೇತುಗರೆ ಪ್ರತಿದಿನದಿ । ಜೋತ ಮುಸುಡಿಲಿ ಬಪ್ಪ । ರೀತಿಯೇನೆಂದು
ನಿಷ್ಠುರದೆ ॥೩॥

ರಾಗ ಕೊರವಿ ಏಕತಾಳ

ಸಲಾಮುಸಲಾಮು ಜೀಯ । ಯಮಧರ್ಮರಾಯ । ಸಲಾಮು
ಸಲಾಮು ಜೀಯು ॥ಪಲ್ಲ॥ ಒಡೆಯ ನಿಮ್ಮಪ್ಪಣೆಯ । ಶಿರದಿಪೊತ್ತು ।
ಪುಡುಕುತ್ತ ಮನೆಮನೆಯ ॥ ನಡೆವೆವು ದಿನತೆರ ಪೊಡವಿಯ ಜೀವರ।
ಗಡಣದೊಳೋರ್ವರ । ತುಡುಕಲ್ಕಾರದೆ । ಕಡುದುಮ್ಮಾನದಿ । ಚಡ
ಪಡಿಸುವೆವಾವ್ ॥ ಸಲಾಮು ॥೧॥ ಭೂಲಲಾಮನು ಸುರಥ। ಕುಂಡಲ
ಪುರ । ವಾಳು ತೀರ್ಪನು ನಿರತ ॥ ಭೂಲೋಕದ ಜನ । ಚಾಲವವನ
ನುಡಿ । ಪಾಲನೆಯುಲಿ ಸಿರಿ । ಲೋಲನ ನಗರವ । ಲೀಲೆಯೊಳೈದುವ।
ರಾಲಿಸುದಾತ ॥ ಸಲಾಮು ॥೨॥ ರಾಮ ಮಂತ್ರದ ಬಲದಿ । ಅಖಿಲರು
ವಿಷ್ಣು । ಧಾಮಕೈದುವರ್ಥಲದಿ ॥ ಹೋಮಹವನವೆನಿ । ಪಾಯುಹ

ಕರ್ಮ ನಿರ್ನಾಮವಗೈದಾ ॥ ಭೂಮಿಪ ಧ್ಯಾನದ ನೇಮವನಿತ್ತಿಪ ।
ನಾಮಹಿಯುಗಲದಿ ॥ ಸಲಾಮು ॥೩॥

ಭಾಮಿನಿ

ದೂತರಾಡಿದ ನುಡಿಗೆ ಖಿತಿಯಲಿ।ಪ್ರೇತಪತಿ ಗುಡುಗುಡಿಸಿ ಪಲ್ಮೊರೆ।
ದೀತತೂಕ್ಷಣ ಬಡಿದು ನೂಕಿರಿ ಪೇತುಗರನೆನುತ ॥ ಭೂತಳದ ಪರ
ನೊರಜುಗಳ ಬಲು । ಹೇತರದು ನಾ ಕಾಂಬೆನೆಂದು ಮ । ಹಾತಿಶಯ
ರೌದ್ರದಲಿ ಕರಣಿಕ ವ್ರಾತಕಿಂತೆಂದ ॥೧॥

ರಾಗ ಕೇದಾರಗೌಳ ಝಂಪೆತಾಳ

ಚಿತ್ರಗುಪ್ತರು ಕೇಳಿರೊ । ಜವದೊಳಪ । ಮೃತ್ಯುವನು ಬರಹೇಳಿರೊ॥
ಮತ್ತೆಲ್ಲರುಜಿನ ವ್ರಾತ । ಬರಲಿ ಕಫ । ಪಿತ್ತ ಜ್ವರ ಶೀತ ವಾತ ॥೧॥
ಘೋರ ಹಾವಳಿ ಗ್ರಂಥಿಕ । ಸನ್ನಿ ಮಹ । ಮಾರಿಕಾ ಚಾತುರ್ಥಿಕ ॥
ಕ್ರೂರ ಕ್ಷಯಾಪಸ್ಮಾರ। ಪೊರಮಡಲಿ । ಭೂರಿ ಬಲ ಜತೆಗೆ ಪೂರಾ ॥೨॥
ಎನುತ ಮಹಿಷನನೇರಿದ । ಕುಂಡಲಾ। ವನಿಯ ಮುತ್ತಲು ನೋಡಿದ॥
ವನಜಲೋಚನ ಪಾರ್ಷದ । ಡಹಾಯ್ದು । ರಸಕ ಹರ್ಷಸುಪ
ರ್ಷದ ॥೩॥

ರಾಗ ಭೈರವಿ ಅಷ್ಟತಾಳ

ನಿಲ್ಲು ನಿಲ್ಲೆಲೊ ಡಡಿಗ ।।ತನವೆಲ್ಲ । ನಿಲ್ಲಿಸುವೆನು ನೋಡಿಗ ॥ ಫುಲ್ಲ
ನಾಭನ ಭಕ್ತನಲ್ಲಿ ದ್ವೇಷವ ಗೈವ । ಖುಲ್ಲನ್ಯಾರೊದರು ಬೇಗ ॥೧॥
ಧರೆಯ ಜೀವಿಗಳಸುವ । ಕೊಂಡೊಯ್ದಿಕ್ಕಿ । ನರಕದಿ ದಂಡಿಸುವ ॥
ಸರುವಧಿಕಾರ ಪೊಂದಿರುವಂತಕನು ನಾ ನೀ । ನರು ಹ್ಯಾರೆನ್ನದೈವ
ವ ॥೨॥ ಹರಿಯು ಪಾರ್ಷದ ಹರ್ಷನು । ಸ್ವಾಮಿಯ ನೇಮ । ವೆರದೀ
ಹೊಳಲ ಕಾಯ್ವನು ॥ ತರುಣಿಜನಾದರೇನ್ ಶರಣರ ತುಡುಕಲಿ ।
ಕಿರುವಧಿಕಾರವೇನು ॥೩॥

ರಾಗ ಶಂಕರಾಭರಣ ಮಟ್ಟೆತಾಳ

ಕಾಮಬಿಂಕವಿರಲಿ ಸನಿಹ । ಸಾವ ಸಮಯ ಬಂತು ಯಮನ ॥ ಸೋವ
ನೋಡೆನುತ್ತಲೆಸೆದ ಕಾಲ ಪಾಶವ ॥೧॥ ತಾ ಮುದದಲಿ ಹರ್ಷನದರ ।
ಪಾಮುಕರದಿ ಪಿಡಿವಲಯಮ । ಭೀಮನೆನೆ ಕೃತಾಂತ ಸುರಿದುದ್ದಾಮ
ದಂಡವ ॥೨॥ ನೆಗಹಿ ಬಡಿಯಲದನು ಹರ್ಷ ನಗುತ ಬಲದ ಹಸ್ತದಿಂದ
ಆಗಡುತನದಿ ಪಿಡಿಯೆ ಗಜರಿ । ಖಗಜ ಸತ್ವದಿ ॥೩॥

ಭಾಮಿನಿ

ಸೆಳೆಯುತಿರ್ದನು ಮಿತ್ತಲತ್ತಲು । ಮುಳಿದು ಪಾರ್ಷದ ನೆಳೆಯುತ್ತೀ
ರ್ವರು।ಬಳಲಿದರು ಪಿರಿದಾಗಿ ಕಾಣದೆ ಗೆಲವ ನುಭಯತರು ॥ಹೊಳಲ
ಪೊಗುವಪ ಮೃತ್ಯು ಬಳಗವ । ತುಳಿದು ಹಿಂಗಿಸಿದನು ಸುಹರ್ಷನು ।
ತಿಳಿವುತಿವ ಚರರೈದಿ ಪೇಳಿದರಿಳೆಯ ಪಾಲಂಗೆ ॥೧॥

ರಾಗ ಮುಖಾರಿ ಏಕತಾಳ

ಲಾಲಿಸಬೇಕು ಜೀಯ ನುಡಿಯ । ಸಲಾಮು ಒಡೆಯ । ಯೇಳಕಾಗ
ಲ್ರೀ ಗಡಿಬಿಡಿಯ ॥ಸಲ್ಲ॥ ಕಾಳನು ನಮ್ಮಲಿ । ದಾಳಿಗೆ ಬರೆ ಸ್ತ್ರೀ।
ಲೋಳನ ಪಾರ್ಸದ । ಕಾಳಗಕೊಟ್ಟರು ॥ಲಾಲಿ ॥ಅ.ಪ.॥ ಬೀಶಲೊ
ಮ್ಮೆಗೆ ಕಾಳ ಪಾಸ।ಸಳದನದ । ಪಾರ್ಸದೇರ್‌ಗೊಳಲಿಯಿರಿಯ ಹರ್ಸ॥
ಬಾಶುರ ದಂಡದಿ । ಗಾಶಿಪೆ ತಾನೆನು । ತಾಸೂರ್ಲ್ಯಜನಿಡೆ । ರೋಸದಿ
ಕೈಯಿ।ಟ್ಟೀಶುಭಟನು ಕ । ಟ್ಟಾ ಶುರದಿಂದೆಳ್ಳೆ । ವಾಶಮಯದಿ ಮಯಿ।
ಸಾಸನ ಬಿಡದೆ ॥ ಲಾಲಿ ॥೧॥ ಅತ್ತಲೆಳೆವ ಯಮರಾಜ । ಪಾರ್ಸದ
ಬಿಡ । ದಿತ್ತ ಜಗ್ಗುವವ್ರೊಳ್ಕೀ ವೋಜ ॥ ಪರ್ತ್ಯಕ್ಷದಿ ಕಾಂ । ಬುತ್ಯವಗ
ಳಿರೆ । ವೊತ್ತಿಗೆ ತೆರಳಿ ಮ । ವತ್ತರ ಶ್ವಾರಿಯು ॥ ಚಿತ್ರಕೆ ಶತ್ಯಾಶತ್ಯ
ಗಳರಿಕೆಯು । ಮತ್ರವುದೇಳ್ಳೆ । ವೊತ್ತು ಗಳೆಯದೆ ॥ಲಾಲಿಸು ॥೨॥

ವಾರ್ಧಿಕ

ಚರರ ನುಡಿಗಾ ಸುರಥ ಧರಣಿಪತಿ ನಸುನಗುತ । ಜರೆದನೇನು ಚಿತ್ರ
ಪರಿಮಾಯೆ ಸರ್ವತ್ರ । ಸರನೊರಜು ನಾನೆಲ್ಲಿ ಹರಿಯ ಪಾರ್ಷದರೆಲ್ಲಿ।
ಅರಿಯಲೆಮ ಧರ್ಮನೆಲ್ಲಿ ॥ ತೆರಳಿ ನೋಳ್ಪೆನು ವಿನುತ ಬರಲಿಲ್ಲ ಮಿಹಿ
ರಸುತ । ಶರಣ ಹರ್ಷರ್ಭರದಿ ಹುರುಪಡಿಸಿ ಮತ್ಸರದಿ । ಉರಿಯು
ಗುಳುತಾರ್ಭಟಿಸಿ ಉರುಳುತೇಳುತ ಮಥಿಸಿ।ಜರೆವುತೆಳೆವುದನೀಕ್ಷಿಸಿ ॥೧॥

ರಾಗ ಕಾಂಬೋಧಿ ಝಂಪೆತಾಳ

ಧಾರಿಣೀಪತಿ ನೊಂದು । ದೂರದಿಂ ಕೈಮುಗಿದು । ಸಾರಿ ಶಕ್ತ್ಯಾಯು
ಧವ ಪಿಡಿದು ॥ ಭೂರಿ ದೈನ್ಯದೊಳೆಂದ । ವೈರವೇಕಿನಿತು ದಯೆ ।
ದೋರಿ ಸೈರಣೆಯ ತಾಳುವುದು ॥೧॥ ಕಾಯುಕವಿದೇನು ಯಮ।ರಾಯ
ಹರಿ ಪಾರ್ಷದರು । ಪ್ರೀಯರನ್ಯೋನ್ಯರುಭಯತರು ॥ ಶ್ರೀಯರಸ
ನಾಜ್ಞೆಯಂ । ತಾಯತಿಕೆಯಲಿ ನಡೆವ । ದಾಯುಗರು ಬಹುಮಾನ
ಯುತರು ॥೨॥ ಕಲಹವಿವ ಬಿಡಿರೆನುತ । ಸೆಳೆಯಲೀರುವರ ಕೈ । ಗಳ
ಚಿ ಬರೆ ಕೈದುಗಳ ಕೊಂಡು । ತಲೆವಾಗಿ ಪಾರ್ಷದ ನಿ । ಗಿಳೆಯ ಪತಿ
ಜವನಡಿಯೊ । ಳಿಳುಹಿ ಶಕ್ತಿಯ ನಮಿಸೆ ಕಂಡು ॥೩॥

ರಾಗ ನವರೋಜು ಏಕತಾಳ

ಗುಣಕೆ ಮೆಚ್ಚಿದೆ ಭೂಪ । ನಿನ । ಗೆಣೆಯ ಕಾಣೆ ಪ್ರತಾಪ ॥ ಸನು
ಮತವಹವರ । ವನುಕರುಣಿಸುವೆನು । ಮನದಿರವೆನಗೊರೆ ಮನುಮಥ
ರೂಪ ॥೧॥ ನಾಮ ಮಂತ್ರದ ಬಲದಿ । ಕೊರೆ।ಯಾ ಮಾತಿಲ್ಲೀಭವದಿ॥
ನೀಮಹಿಮನು ತವನೇಮವಲಂಘ್ಯ ಶ್ರೀ । ರಾಮ ದರ್ಶನ ಮಮ ।
ಕಾಮನೆ ಜೀವದಿ ॥೨॥ ಮುಂದೆ ರಾಮಾಹ್ವಯದಿ । ಹರಿ । ಬಂದಪ
ನೆಜ್ಞದನೆ ವದಿ ॥ ಸಂದರ್ಶನವಹು । ದಂದಿಗು ಯೌವ್ವನ । ದಿಂದಿರು
ಸತಿಸುತ । ರೊಂದಿಗೆ ಹರುಷದಿ ॥೩॥

ಭಾಮಿನಿ

ಲೋಕವಾಟದ ರಂಗ ಜೀವಾ । ನೀಕ ಪಾತ್ರಗಳರಿಯೆ ದ್ವಂದ್ವಾ । ನೇಕ ಸಚರಾ ಚರಗಳರಿವವಿವೇಕ ಪರಿಣಾಮು ॥ ನಾಕ ನರಕವನಂತವಹ ಸಾ।ಲೋಕ್ಯ ವಿನಿತು ವಿಭಿನ್ನ ವಿಶ್ವವ।ತಾ ಕುಣಿಪ ಹರಿಯಿಚ್ಛೆಗೆಂದಿಗು ತಾಕದಾತಂಕ ॥೧॥

ಕಂದಪದ್ಯ

ಇಳೆಯಲಿ ನಡೆದಪ ಕರ್ಮಂ । ಗಳಿಗಡ್ಡೈಸದೆ ಧ್ಯಾನದಿ ಪರತರ ಪದ ವಂ॥ ಸತಿ ಸಾಧಿಸು ನೀನೆನುತಂ । ಘಳಿಲನೆ ವೈದೆಗೆದಂ ಬಲ ಸಹಿತಿನಜಂ ॥೧॥

ವಾರ್ಧಿಕ

ಕಾಲ ನಾಣತಿಗೊಡಂಬಟ್ಟು ಸುರಥಾಖ್ಯ ಭೂ । ಪಾಲ ಸೌಖ್ಯದೊಳ್ಳಿಳೆಯ ನಾಳುತಿರೆ ಮುಂದೆ ಬಹು । ಕಾಲಾಂತರದಿ ಭುವಿಯ ಮೊರೆ ಕೇಳಿ ಮಾರಮಣ ಖಳ ರಾವಣನ ವಧೆಗೆ ॥ ತಾಳಿನರರೂಪವನ್ನಿನ ಕುಲಜ ದಶರಥ ನೃ।ಪಾಲ ಸುತನೆಂದೆನಿಸಿ ರಾಮಾಖ್ಯೆಯಿಂದುದಿಸಿ । ಶ್ರೀಲತಾಂಗಿಯೆನಿಪ್ಪ ಜಾನಕಿಯ ನೆವದಿ ದೈ । ತ್ಯಾಳಿಯಖಿಲವ ಮರ್ದಿಸಿ ॥೧॥

ಭಾಮಿನಿ

ಸೀತೆಯಿಂವರಜರೊಡನ ಯೋಧ್ಯಾ।ಧಾತ್ರಿಯನು ಪಾಲಿಸುತಲೋರುವ। ಧೂರ್ತ ರಜಕನ ನುಡಿಗೆ ತೊರೆದ ಪುನೀತೆ ಜಾನಕಿಯ ॥ ಆತಳೋದರಿ ಕುವರರನು ಮುನಿ । ನಾಥ ವಾಲ್ಮೀಕಾಶ್ರಯದಿ ಪಡೆ । ದಾತಿಶಯ ಸೌಖ್ಯದೊಳಿರಲು ರಘುಜಾತನೊಂದಿವಸ ॥೧॥

ರಾಗ ಕಾಂಬೋಧಿ ಝಂಪೆತಾಳ

ಇತ್ತನೋಲಗ ಸಚಿವ । ಮತ್ತಧಿಕ ಸಾಮಂತ । ವೊತ್ತ ಗುರು ಪಂಡಿತೋತ್ಕರದಿ ॥ ಮಿತ್ರ ಮನ್ನೆಯ ಸಹಜ । ಪುತ್ರ ಪ್ರಜೆ ಪರಿವಾರ । ದೊತ್ತಿನಲಿ ಸಾಕೇತ ಪುರದಿ ॥೧॥ ಒಂದು ಕಡೆಯಲಿ ವಾದ್ಯ । ವೃಂದ ನರ್ತನಗೀತ।ಒಂದು ಕಡೆಯಲಿ ವೇದಘೋಷ।ಒಂದು ಕಡೆ ರಾಜಾರ್ಘ। ಸಂದಾಯದೆಣಿಕೆ! ಮ।ತ್ತೊಂದು ಕಡೆ ಪೊಗಳಿಕೆ ವಿಶೇಷ ॥೨॥ ಸಡೆದಿರಲು ಸಭೆಯೊಳಗೆ । ಸಡಗರದೊಳುಪಚರಿಸಿ । ಕಡೆಗಣಿಸದೆಲ್ಲತರತಮವ ಜಡಜಲೋಚನನೀಯೆ । ತೊಡನಂಗ ಚಿತ್ತಗಳ । ಒಡಲೊಳ ವನಿಜೆಯ ನಿರ್ಗಮಾವ ॥೩॥

ಭಾಮಿನಿ

ನೆನೆದುಮಿಗೆ ಕುದಿಕುದಿದು ಮೌನದಿ । ಚಿನುಮಯಾತ್ಮಕ ನಿರ್ವನನ್ನಗೆ। ಮುನಿಕುಲೇಂದ್ರನ ಗಸ್ತ್ಯನೈದಿದನಿನನ ತೇಜವಲಿ ॥ ಜನಪನೆದ್ದಡಿಗೆರಗಿ ಭಕ್ತಿಯೊ । ಳನುಪಮನ ಕರತಂದು ದಿವ್ಯಾ । ಸನವನೇರಿಸಿ ಪುಣ್ಯಪದ ಯುಗ ವನಜಗಳ ತೊಳೆದು ॥೧॥

ರಾಗ ಶಂಕರಾಭರಣ ತ್ರಿವುಡೆತಾಳ

ಶಿರದಿ ತೀರ್ಥವ ಧರಿಸಿರಾಘವ । ಕೊರಳ ಬಾಗಿ ನಿಂದಿರೆ ॥ ಪರಿಯ ನೀಕ್ಷಿಸುತೆಂದ ಮುನಿಯ । ಚ್ಚರಿಯುಗೊಳುತ ॥೧॥ ಇಳೆಯ ದೂರನು ಕೇಳಿ ನರನಾ । ಗಿಳಿದ ಹರಿ ನೀ ಸಮರದೆ ॥ ನಳಿನಭವ ಪೌತ್ರಾದಿ ದಾನವ । ಕುಲವ ತರಿದೆ ॥೨॥ ಕೊಡುವ ಕೊಂಬುವ ನಿಡುವ ಕೊಲ್ಲುವ। ಒಡೆಯ ನೀನೇ ಸಕಲಕೆ ॥ ಪೊಡವಿಗಿತ್ತಿಹೆ ನಲಿವ ನಿನಗೆ ದು । ಗುಡವಿದೇಕೇ ॥೩॥

ಭಾಮಿನಿ

ಅಳುಕಿ ರಘುವರನೆಂದ ದಶಗಳ । ಜಲಜಸಂಭವ ಕುಲಜನಹುದೇ ।

ಖಳನು ತಾನೇಕಾದ ದಾನವ ಬಳಗವೆಂತಾಯ್ತು ॥ ಇಳೆಗೆ ಕಂಟಕನಾದ ನೆಂತದ । ತಿಳುಹಿಯೆನ್ನಯ ಮನದ ಸಂಶಯ । ಕಳೆಯಬೇಕೆಂದೆರಗಿ ಮುನಿ ನೃಪ ತಿಲಕಗೆಂದ ॥೧॥

ವಾರ್ಧಿಕ

ಧೀರ ಕೇಳ್ ವೈಕುಂಠ ದ್ವಾರ ಪಾಲಕರವರು । ಘೋರ ಖಳರಾಗುದಿಸಿ, ಮಾರಮಣ ನಿಂಹತಿಸಿ । ಮೂರು ಜನ್ಮಾಂತರದಿ ಸಾರತರ ಸ್ವಸ್ಥಳಕೆ ಸಾರಬೇಕೆಂಬ ತೆರದಿ ॥ ಕ್ರೂರತರ ಶಾಪವನ್ನೋರಂತೆ ಪಡೆಯುತ ಮುರಾರಿ ವಧು ಕೈಕಸಿಯೊಳಾ ಋಷಿ ಪುಲಸ್ತ್ಯಜ ಕುಮಾರರಾಗುದಿಸಿ, ತ್ರೈಧಾರ್ಯಗುಬ್ಬಸರೆನಿಸಿ ವೀರ ನಿನ್ನಿಂದಳಿದರು ॥೧॥

ಕಂದ ಪದ್ಯ

ಮಾತದು ಹೃದಯಕೆ ವಜ್ರಾ । ಘಾತಮಾಗೆ ಕುಸಿದಂ ರಘುನಾಥಂ ಬುವಿಯೊಳ್ ॥ ಭೀತಿಯೊಳಿರೆ ಸಭೆ ಕೌಸಲೆ । ಜಾತಂ ಕಂದೆರದೆಂದಂ ಕಾತರಿಸುತ್ತಂ ॥೧॥

ರಾಗ ಸಾವೇರಿ ಆದಿತಾಳ

ನಿತ್ಯ ಪೂಜಿತರೆಮಗೆ । ವಿಪ್ರರುಬ್ರಹ್ಮ । ಹತ್ಯೆ ಬಂದುದೆ ತನಗೆ ॥ ಸ್ತುತ್ಯ ಸೂರ್ಯಾನ್ವಯಕೆ । ಮಸುಳಾಯ್ತೆನ್ನಿಂದ । ಸತ್ಯಕ್ಷಾತ್ರಾನ್ವಯಕೆ ॥೧॥ ದುರುಳನ ಬಂದಿಯಾದ । ಸತಿಯ ಪತಿ । ಕರಿಸಿದೊಂದಪವಾದ ॥ ಪರಿಶುದ್ಧಳನು ತೊರೆದ।ನೆನ್ನುತ ಮತ್ತೆ । ಧರೆಯೊಳಾಂತೆನು ಬಿರುದ ॥೨॥ ಒಡಲು ಸುಡುವುದೊಳಗೆ । ಲೋಕದ ಕೆಡು । ನುಡಿ ದಹಿಪುದು ಹೊರಗೆ ॥ ತಡೆವುದೆಂತಿದ ಕಡೆಗೆ । ಬರಸಿಡಿಲಾಗಿ । ಹೊಡೆದ ಹತ್ಯೆಯನು ವಿಗೆ ॥೩॥

ರಾಗ ಬೇಗಡೆ ಅಷ್ಟತಾಳ

ಸಾಕು ಸಾಕೀ ಚಿಂತೆ ರಘುನಾಥ । ನಿರ್ಲೇಪ ನಿರ್ಗುಣ । ಅಕಲಾಕೃತಿ ರಹಿತ ವಿಧಿತಾತ ॥ ಲೋಕ ನಾಯಕನೇಕ ನಾಮಪ । ನೇಕ ಪಾಪಾನೀಕ ದುರುಬೆಯ । ತಾಕಳಿವು ದೈ ಲೌಕಿಕರ ತೆರ । ನೇಕಳುವೆ ಶ್ರೀದಿವ್ಯ ಸಾನತ ॥೧॥ ಮೇದಿನೀಸುತೆಯುಗ್ನಿ ಪರಿಪೂತೆ । ನೀ ತೊರೆದಿರುವುದು ವಾದಕಲ್ಲದು ಕೀರ್ತಿ ಕಾಮುಕತೆ ॥ ಬೈದು ಫಲವೇನಾದ ಕಾರ್ಯವ । ದಾದುದಿನ್ನೀ ಖೇದವೇತಕೆ । ಆದಿಲಕ್ಷ್ಮಿಗೆ ಬಾಧೆಯಿಲ್ಲೆಲೆ । ಮೋದದಿಂ ದಿಹಳಾದರಲ್ಲಿಂಯೊ ॥೨॥ ಆದರೀ ಹತ್ಯೆಯ ನಿವಾರಣೆಕೆ । ಪರಮಾದರಕೆ ಹಯ । ಮೇಧ ಯಾಗವ ಮಾಡಿ ಮುನಿ ಗಣಕೆ ॥ ಸಾದರದಿ ದಾನಾದಿಗಳನು । ತ್ವಾದರಿಸು ವಿಗೆಮೋದವಪ್ಪುದು । ಸಾಧಿಸಿ, ಹರಿದ ನಾದಿಯುರಿಮರು । ತಾದಿ ನಿನ್ನವರಾದ ಭೂಪರು ॥ಸಾಕು ॥೩॥

ಭಾಮಿನಿ

ಸನುಮತದೊಳಿದ ನಡೆಸು ಬಹೆವೆಂ । ದೆನುತ ಮುನಿಯಾಶ್ರಮಕೆ ತೆರಳಿದ । ಜನಪ ಗುರುವಭಿಮತದಿ ಸರಯೂ ತಟದಿ ಶಾಲೆಯನು ॥ ಘನತವಕದಲಿ ಗೈದು ವಾರುವ । ವನುತರಿಸಿ ಸಂಭಾರ ಸಿದ್ಧತೆ । ಯನುಕರಿಸಿರುಚಿರಾಯ ಬಾಂಧವಗಣವ ಮೇಳೈಸಿ ॥೧॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ಗುರುವಸಿಷ್ಠರ ಮುಖದಿ ದೀಕ್ಷೆಯ। ಹರುಷದಿಂ ಕೈಗೊಂಡು ಯಾಗದ। ತುರಗವನು ಶೃಂಗರಿಸಿ ಪೂಜಿಸಿ। ಸುರು ಚಿರದೊಳು ॥೧॥ ಬರೆಸಿ ಬಿರುದಾವಳಿಯ ಪಟವನು । ಶಿರದಿ ಬಂಧಿಸುತದರ ಕಾಪಿಗೆ । ತೆರಳು ಬಲ ಸಹಿತೆನುತ ಶತ್ರುಹ । ಗೊರೆದ ನಯದಿ ॥೨॥ ಮಲೆತವರ ಮರ್ದಿಸುತ ಸ್ನೇಹ । ಕ್ಕೆಳಸು ವರ ಮನ್ನಿಸುತ ಮರೆಗೊಂ ।ಡಿಳೆಯರಸನು ಸಲಹಿ

ಪಾಲಿಸು । ಕುಲದ ನಯವ ॥೩॥ ಎನಲು ತನುಪುಳಕದಲಿ ಶತ್ರುಹ । ಜನಪನಂಘ್ರಿದ್ವಯದಿ ಪಣೆಯಿ । ಟ್ಟೆನಗೆ ಹರಕೆಯಿದೆಂದ ನುರುತರ । ವಿನಯದಿಂದ ॥೪॥ ಅನಕ ಹೊಂದಳಿಗೆಯಲಿ ವೀಳ್ಯವ । ಚಿನುಮಯಾತ್ಮಕ ಪಿಡಿದು ನಿಂದಿರೆ । ಘನಜವಧಿ ಭರತಾತ್ಮಭವ ತಾ । ಮಣಿದು ನುಡಿದ ॥೫॥

ರಾಗ ಭೈರವಿ ಆದಿತಾಳ

ತಾತ ನೀನವಧರಿಸು । ಜಾತನದೊಂದು । ಮಾತದಯು ದಿಮನ್ನಿಸು ॥ ನಾ ತೆರಳುವೆ ಶತ್ರು । ಘಾತನೊಡನೆ ಜೈತ್ರ । ಯಾತ್ರೆಗೆನ್ನನು ಕಳಿಸು ॥೧॥ ಎಳೆಯನೆಂಬೆಣಿಕೆ ಬೇಡ । ಯುದ್ಧಕೆ ವಿಷ । ಗಳನೊಮ್ಮೆ ಬರಲಿ ನೋಡಾ ॥ ಗೆಲಿಮು ಸೊಕ್ಕಿದಬಲು । ಬಲರ ತುಳಿದು ಕಪ್ಪ । ಗಳ ಹೊರಿಸುವೆನು ಗಾಢ ॥೨॥ ತಪಪಾದಾಂಬುಜ ಕರುಣ । ಶ್ವಶುರ ನಿತ್ತ । ಕವಚ ಧನುಷ್ಯತೂಣ ॥ ಸವನಿಸಿರಲು ನಿನ್ನ । ಕುವರಗಾವುದು ಗಣ್ಯ । ತವಕದಿ ಹರಸುಯನ್ನ ॥೩॥

ಭಾಮಿನಿ

ಎಂದು ಪುಷ್ಕಳನೆರಗಲಾನಿಜ । ಕಂದನನು ತೆಗೆದೆತ್ತಿ ಸೇನಾ । ವೃಂದ ದೊಡೆತನದೊಡನೆ ವೀಳ್ಯವ ನಂದನಂಗಿತ್ತು ॥ ಚಂದದಿಂದ ಸುಮಂತ್ರ ಜಾಂಬವ । ನಿಂದ್ರಪೌತ್ರಾನಿಲಜ ಸೌರ್ಮುರ । ನಂದದಿಂ ಮೇಳೈಸಿ ಬೆಂಬಲಕೆಂದು ನೇಮಿಸಿದ ॥೧॥

ರಾಗ ಮಾರವಿ ಏಕತಾಳ

ತ್ವರಿತದಿ ಶತ್ರುಹನೆರಗುತಲಣ್ಣನ । ಚರಣಕೆ ಮುದದಿಂದ ॥ ವರಸು ಮುಹೂರ್ತದಿ ಪೊರಡಿಸಿ ಸೇನಾ।ಶರಧಿಯ ಜವದಿಂದ ॥೧॥ ನಡೆದನು ವಾಹಿನಿಯುಡಿಯ ಝುಡಿತಕಿಳೆ । ನಡುಗಿತು ಕೆಂಧೂಳು ॥ ಅಡರಿತಿನನ

ಪ್ರಭೆ ಗೆಡರಾಯ್ತುಕ್ಕಿತು।ಕಡೆಯಲಿ ಕಡಲೇಳು ॥೨॥ ಮೂಡಣ ನೃಪರ ವಿಭಾಡಿಸಿ ಕಪ್ಪವ । ಜೋಡಿಸುತುತ್ಸಹದಿ ॥ ಕೂಡಲೆ ತೆಂಕಣನಾಡ ಪ್ರವೇಶವ । ಮಾಡಿದನತಿ ಜವದಿ ॥೩॥

ಭಾಮಿನಿ

ಮಲೆತರಾಯರ ಗೆಲಿದು ಶತ್ರುಹ । ಬಲಸಹಿತ ಮುನ್ನಡೆಯೆ ಕಂಟಕ । ಹಳುವ ಕೈದಿತು ತುರಗವಾವನ ವಳಯಪತಿಯಾದ ॥ ಖಳನುದು ಮುರ್ಖನೆನಿಪವ್ಯಾಧನು । ಚಳಕದಿಂ ಮಿಗೆ ಬೇಟೆಯಾಡುತ । ಬಳಗ ಸಹಬಹನೀಕ್ಷಿಸಿದನೀ ಹೊಳೆವ ತೇಜಿಯನು ॥೧॥

ರಾಗ ಖಮಾಚ್ ಏಕತಾಳ

ಆರೆರ್ಯೇ ಏನ್ಯಾಂ । ಬರಮಕೆಂಚ । ದುರಗಕರಿಯ । ವೋಬಣ್ಣ ॥ ಆರಿಯಲ್ ಚೋಜಿಗ । ಬರುವಾಕುದ್ರೆಯು । ಮಿರಿ ಮಿರಿ ಮಿಂಚುವ । ಮೈಬಣ್ಣ ॥೧॥ ಕಣ್ಣಿಗೆ ಚೌಬೇಸ್। ಯೊಣ್ಸುಂಗ್ಯೆತೆ । ಶಿನ್ನದಯೇರ್। ಮೈತುಂಬ ॥ ಮಿಣ್ಣನೆ ಒಯ್ದಿದ । ಶನ್ನಿಗೆ ಕೊಡಲೀ ದಿಣ್ಣನವೊಗಳ್ಯಾಳ್ । ಬಾಯ್ತುಂಬ ॥೨॥ ಗಡನಿದಯಿಡ್ಕೋ । ಗುಡಿಸಲಿಗೊಡ್ಕೋ । ವುಡುಗಶಿಪಾಯ್ಮಗ । ದುರುದುಂಡ ॥ ನೆಡಿ ಬೆನ್ಹತ್ತು । ಪಡೆಗೊಳುವತ್ತು । ಮಡಗಲಿವೊಡೆದೀ । ಮಿಗದಿಂಡ ॥೩॥

ಭಾಮಿನಿ

ಒಡೆಯನಾಜ್ಞೆಗೆ ಶಬರರಶ್ವವ । ಪಿಡಿದು ಸಾಗಿಸುತಿರಲು ಕಾಣುತ । ಲೊಡನವರನಡಗಟ್ಟಿ ಕೆಡೆದರು ಕಡಿದು ರಾವುತರು ॥ ಪಡೆಯುಳಿಯೆ ಕಿಡಿಗೆದರಿ ದುರ್ಮುಖ । ಗುಡುಗುಡಿಸುತಿದಿರಾದ ನೀಕ್ಷಿಸಿ । ತಡೆದು ಗರ್ಜಿಸುತಿಂದ್ರನಂದನನೊಡಲ ಭವನೆಂದ ॥೧॥

ರಾಗ ಮಾರವಿ ಏಕತಾಳ

ಯಾರೊ ಕಿರಾತನೆ । ಶ್ರೀರಾಮನ ಮಖ । ವಾರುವವನು ತಡೆದು ॥
ಸಾರದಿರೆಲೊ ಯಮ । ನೂರಿಗೆ ಶತ್ರುಘ್ನ । ವೀರಗೆ ಶರಣಹುದು ॥೧॥
ಎಲ್ಲಿಯ ರಾಮ್ಯಾ । ಯಲ್ಲಿಯ ಸತ್ರುಘ। ಯಲ್ಲಿಯ ನೀನ್ಯಾರ್ ಮ್ಯಾಂ॥
ಬಲ್ಯಿದ ದುರುಮುಗ । ಗೆಲ್ಯಾರೆಣ್ಯೆನಾ । ಕೊಲ್ಲುವೆ । ಸರಣಾಗ್ ಬಾ
ಮ್ಯಾಂ ॥೨॥ ಕೋಣಗೆ ಕಿನ್ನರಿ।ಗಾನವೆ ತಡೆ ಕಡೆ । ಗಾಣೆಪೆನೆಂದೆನುತ ॥
ತ್ರಾಣದೊಳೆತ್ತಿ ಕೃ । ಪಾಣದೊಳಿಡಲಿಳೆ । ಗಾನಿದ ಕೈರಾತ ॥೩॥

ಕಂದಪದ್ಯ

ತೆರಳಿತು ಮಖಹಯ ಕೇರಳ । ಧರೆ ಸ್ತ್ರೀರಾಜ್ಯದ ಕನ್ಯಕಪುರಕಂ
ಮಿದನುಂ ॥ ಪರಿಕಿಸಿ ಕಾವಲ ತರುಣಿಯು। ರೆರಗುತ ರತ್ನಪ್ರಭೆಯೆಂಬ
ರಸಿಗೆ ನುಡಿದರ್ ॥೧॥

ರಾಗ ಸಾರಂಗ ಅಷ್ಟತಾಳ

ಲಾಲಿಸುದಯದಿ ರಾಣಿ । ನಾವೆಂಬುದು ಜಾಲವಲ್ಲಿದು ಕಲ್ಯಾಣಿ ॥ಪ॥
ಭಾಳದಿಪಟವಿಹ । ಮೇಲಾದೊಂಗ್ದ ಯವಿಲ್ಲಿ । ಕಾಲಿರಿಸಿಹುದು ಕಾಣಿ
ಅಮ್ಮಣ್ಣಿ ॥ಅ.ಪ ॥ ಒಂದೇ ಕಿವಿಯುಬಾಲವು । ಹಳದಿಮುಖ। ಕೆಂದು
ಗೊರಸು ನೀಲವು ॥ ಗಂಧಲೇಪನಜಲ । ದಾಡದ ಕಾಯ ಕಾಯ ಮೇ।
ಳೊಂದಿದೆ ದ್ವಾತ್ರಿಂಶತಿ। ಲಕ್ಷಣಯುತಿ ॥೧॥ ಚರೆಯರಿಂತೆನಲು ಕೇಳಿ ।
ಧಿಮ್ಮನೆಎದ್ದು । ಭರಿತದಚ್ಚರಿಯ ತಾಳಿ ॥ ಅರರೆ ತಾನದರ ಕಂ।
ಡರಿವೆನೆಂದೆನುತಲಿ । ತರುಣೆರನ್ನೆಯರ ಮೌಳಿ । ತಾ ತೆರಳಿ ॥೨॥
ಆ ಕುದುರೆಯ ನೋಡುತ । ನೆತ್ತಿಯಸ್ವರ್ಣ । ಲೇಖವ ತೆಗೆದೋ
ದುತ ॥ ಸಾಕೇತ ಪತಿಯಂತೆ । ಏಕೈಕ ಬಲನಂತೆ । ತಾಕಾಪಿಗಿದರ
ಓಂತೆ ॥ ಶತ್ರುಘನಂತೆ ॥೩॥ ಧಿರುರೆ ಕಾಂಬೆನು ಸತ್ವವ । ವಿಕ್ರಮವ
ನಾ । ಮೆರೆವೆ ಬಂಧಿಸಿತಸ್ವವ ॥ ತರುಣಿಯರನು ಮಿಕ್ಕ । ಪುರುಷ
ರೆಂಬುವ ಸೊಕ್ಕ । ಮುರಿವೆನೀಕ್ಷಿಸಲಿ ಲೋಕ । ಆ ಬಳಿಕ ॥೪॥

ಭಾಮಿನಿ

ಎನುತ ಸೇನಾಧ್ಯಕ್ಷೆಯುಹ ಮಾ।ಲಿನಿಗೆ ನೇಮಿಸಿದಳು ಚತುರ್ಬಲ। ವನು
ಜವದಿ ಪೊರಮಡಿಸು ಬಂತರಿ ಜನಪತಿಯ ದಂಡು ॥ಹನನಕೆದ್ದೇಳಿನುತ
ರಥವೇ । ರ್ಧ್ವನದಿ ಘೋಷದಿ ಪೊರಟಳತ್ತಲು । ಇನಕುಲೇಂದ್ರಾನುಜ
ಗಚಾರರು ಮಣಿದೊರೆದರಿಂತು ॥೧॥

ರಾಗ ಕೊರವಿ ಅಷ್ಟತಾಳ

ಕೇಳಯ್ಯ ರಘುವರಿಯ । ಶತ್ರುಹರಾಯ । ಪೇಳುವೆವಚ್ಚರಿಯ ॥ಪಲ್ಲ॥
ಒರೆವುದಿನ್ನೇನು ಜೀಯ ॥ ಕಂಡೋರುವೆ । ತರುಣಿ ಮುಖದ ವಾಜಿಯು॥
ತ್ವರಿತದಿ ಬಂಧಿಸಿ । ಧುರಕಬಲಾಭಲ। ವೆರೆದು ಬಂದಳು ಹೇಳ । ಲರಿ
ದಾ ಧಿಮಾಕಿಯ ॥೧॥ ಗಂಡುದ್ವೇಷಿಣಿಯಿವಳು । ಸೈನಿಕ ದೇವ । ದಿಗಂ
ಡರೆಲ್ಲವು ಹೆಂಗಳು॥ ಕಂಡಿಲ್ಲಿಂತ ಹರ ಚಾ । ಮುಂಡಿಯ ಸೇವಿಪ।ದಿಂಡೆ
ಯರಿವದಿರ । ದಂಡಿಸಲೇಳೇಳು ॥ ಕೇಳಯ್ಯ ॥೨॥

ಭಾಮಿನಿ

ದೂತರಾಡಿದ ನುಡಿಯ ಕೇಳುತ । ಖಾತಿಯಿಂ ಕಿಡಿಯುಗುಳಿ ಶತ್ರುಘ।
ನಾತುರದಿ ಕರೆದೆಂದ ಸೇನಾನಾಥ ಪುಷ್ಕಳಗೆ ॥ ಈ ತತೂಕ್ಷಣ ಸಮರ
ಕೆಮ್ಮಯ। ಚಾತುರಂಗವ ಬಲಿದು ಕ್ರೌಂಚವು। ಹಾತಿಶಯದಾಕೃತಿಯ
ವ್ಯೂಹವ ಚಾತರಬೆಸೆಂದು ॥೧॥

ರಾಗ ಮಾರವಿ ಏಕತಾಳ

ಎಂದೆನಲಾಕಿರಿ । ತಂದೆಯ ಚರಣಕೆ । ವಂದಿಸಿ ಪುಷ್ಕಳನು ॥ ಚೆಂದದಿ
ಧನುಶರ । ದೊಂದಿಗೆ ತ್ವರಿತದಿ ।ಪೊಂದೇರಡರಿದನು ॥೧॥ ಬಲಿಯುತ
ಕೋಟೆಯ । ಬಿಲುಠೇಂಕರಿಸಿದ।ಮೊಳಗಿತು ರಣಭೇರಿ ॥ ಜಲಜಭವಾಂ

ದಗಲಲುಗುಪೊಲಬಲಾ । ಬಲಸ್ವೈತರೆ ವೀರ ॥೨॥ ಮೀನಾಂಕನ ಪೊಸ ಸಾಣೆಗಳೆನೆ ಬಹ । ಮಾನಿನಿಯರ ಕಂಡು॥ಜ್ಞಾನವಳಿದು ಬಲ । ಗೋಣಲುಗಿತು ಭರ । ತಾನುಗ ಮುಂಕೊಂಡು ॥೩॥

ಭಾಮಿನಿ

ಬಲುಭಟರಿಗೀ ಮರುಳೆ ಧರ್ಮವ । ನಲಘುತರ ಪೌರುಷವನುಳಿದೀ ಛಳುಕಿನನ್ಯಾಂಗನೆಯರೆಳೆತಕೆ ಸಿಲುಕಲಿಹ ಪರವು ॥ಮಲಿನವಹುದೆದ್ದೇಳಿ ಮೋಹವ । ತುಳಿದು ಮಿಗೆ ಕರ್ತವ್ಯ ಮಾರ್ಗವ । ತಿಳಿದು ಮುನ್ನಡೆಯಿರಿ ವೃಥಾ ಹೊಲೆಗೆಲಸ ಬೇಡೆಂದ ॥೧॥

ರಾಗ ಶಂಕರಾಭರಣ ತ್ರಿವುಡೆತಾಳ

ನುಡಿಗೆ ಮೈ ತೀದೊಡನೆ ಪಳುಭಟ । ಗಡಣ ಧನುವ ನೊಡರಿಸಿ ॥ ತುಡುಕುತಿರೆ ಕೈದುಗಳ ಪೆಣ್ಬಾಲ । ದೊಡತಿ ಶರವ ॥ ಕಡೆಯ ಕಲ್ಪದ ಕಡಲ ತೆರೆಯನೆ । ಝುಡಿಯುತಿರಲು । ಭರತಜ ॥ ತಡೆದು ನೀನಾರ್ಸಾರು ಕಳುಹಿಪು । ದೊಡತಿಗೆಂದ ॥೧॥ ಭಯವೆ ನಾ ಸೇನಾನಿ ಮಾಲಿನಿ । ಜಯಿಸಿ ನಿಮ್ಮ । ತೆರಳ್ವೆನು ॥ ಹಯವ ಕಟಿದಳಾಕ್ಮೆ ರತ್ನಾ । ಪ್ಪಯುಳು ಭಳದಿ ॥೨॥

ರಾಗ ಘಂಟಾರವ ಅಷ್ಟತಾಳ

ಕಡುಹು ಹೆಂಗಳ ದಡುಗೆ-ಸಜ್ಜೆಗಳಲ್ಲಿ ॥ ನಡೆಯದೀ ರಣ। ಕಣದಿ ಶಾಕಿಸಿ। ಗಡಣಕತ್ತಪೆನಡಗನು ॥೧॥ ಪೋಕಮಾತುಗಳೇಕೆ ನಿನ್ನಂತರ ॥ ನೇಕರೆಮ್ಮಯ । ಪಾಕಶಾಲೆಯ। ಚಾಕರಿಯೊಳಿರ್ಪರಂ ॥೨॥ ಜತೆಯ ಮಾಳ್ಪೆ ನಾ ನತದೃಪ್ತರಿಂಗೆನು । ತತಿಶಯದ ಶರ ತತಿಯನೆಸಲದ । ಹತಿಸಿ ಪುಷ್ಕರಗೋಪದಿ ॥೩॥

ಭಾಮಿನಿ

ಕುದಿದು ದಿವ್ಯಾಸ್ತ್ರಗಳ ಸುರಿಸಿದ । ಸದುಭುತವನೇನೆಂಬೆ ರಿಪುರಥ । ಕುದುರೆ ಸಹಿತಿಳೆಗುರುಳಿದುದು ಮತ್ತದಕೆ ಪಾಲಿಸಿಯು ॥ ಕದನದಲಿ ಕೈಸೋತಳೆಂದೆನು । ಪುದನು ರತ್ನಪ್ರಭೆಯು ಕಂಡ । ತ್ಕಧಿಕರೋಷದಿ ತೆರಳಿ ತಡೆದುಸುರಿದಳು ಪುಷ್ಕಳಗೆ ॥೧॥

ರಾಗ ಭೈರವಿ ಅಷ್ಟತಾಳ

ಯಾರೆಲೊ ದುರುಳ ನೀನು । ಸುಮ್ಮನೆ ಓಂದೆ । ಸಾರು ಸಾರಿದೆನು ನಾನು ॥ ಈ ರಾಜ್ಯದೊಲ್ಲಭೆ । ಧೀರೆ ರತ್ನಪ್ರಭೆ । ತೋರುವೆನೆಮ್ಮ ನೂರನು ॥೧॥ ಮಾನಿನಿ ಮಣಿ ಹಯವ । ಒಪ್ಪಿಸದಿರೆ । ಜಾಣೆ ಪೊಂದುವೆ ಲಯವ ॥ ಭಾನುವಂಶಜ ಭರತನಾಗ ಸೇನಾನಿ । ನಾನೆ ಪುಷ್ಕಳನೆಂಬವ ॥೨॥ ಓಹೊ ಪುಷ್ಕಳನೆ ನೀನು । ಎಲ್ಲವ ನುಂಗ । ಲಾಹ ಪುಷ್ಕಲಣೆ ನಾನು ॥ ಕಾತುರ ಮುಖಕೆ ಪೂರ್ಣಾಹುತಿಯಾಹೆ ನಿನ್ನ । ಸಾಹಸ ನಿಲಿಸುವೆನು ॥೩॥ ಹೆಣ್ಣು ನೀನಾಗಿರುವೆ । ಸೊಕ್ಕಿಲಿ ಗಂಡು । ಗಣ್ಯರೊಡನೆ ಹೋರುವೆ ॥ ಮಣ್ಣ ತಿನಿಸುವೆ ಮುಕ್ಕಣ್ಣಗಂಜೆನು ಹಗೆ। ಯನ್ನು ನೀ ಬಿಡು ಸಾರುವೆ ॥೪॥ ಬಿಡೆನು ಸಾಮದಿ ಹಯವ।ಯುದ್ಧದಿ ನಿನ್ನ । ಹಿಡಿದೊಯ್ದ್ವೆನ್ನಾಲಯವ ॥ ಗುಡಿಸ ಹಚ್ಚುವೆ ನೋಡು । ಕಡು ಹನೆನುತ ತಾಡು । ಗಡಿಯುತೆಚ್ಚಳು ಶರವ ॥೫॥

ಭಾಮಿನಿ

ಬರುವ ಶರಗಳ ಮುರಿದು ಪುಷ್ಕಳ । ನುರುತರದ ದಿವ್ಯಾಸ್ತ್ರ ವೃಷ್ಟಿಯ ಸುರಿಸಲದ ಪುಡಿಗೈದು ಮಾನಿನಿ ಕೆರಳಿ ಕಿಡಿಯಿಡುತ ॥ ಕರದ ಚಾಪವ ಕಸಿದು ಪೌರುಷ । ಮೆರೆವುದಿನ್ನೆನುತಿರಲು ಕಾಣುತ । ಭರತನವರಜ ತಡದು ಕ್ಷಮೆಯನು ಕರಿಸುತಿಂತೆಂದ ॥೧॥

ರಾಗ ಪಂತುವರಾಳಿ ಅಷ್ಟತಾಳ

ತರಳೆ ಈ ಪರಿ ತಪ್ಪಿನಡೆವರೆ। ರಘು । ವರನ ವಾಜಿಯಕಟ್ಟಿ ತಡೆವರೆ
॥ಪಲ್ಲ॥ ಲಲನೆ ಒಪ್ಪಿಸು ಕಪ್ಪ ಸಹಿತಾಗಿ । ನಿನ್ನ । ತಲೆಗಾಯ್ವೆಶತ್ರುಹ
ಲೇಸಾಗಿ ॥ ಕೊಳುಗುಳಕೆಮ್ಮೊಳು ಮಾರಾರಿ । ನಿಲ।ಲಳುಕೆವು ಮರು
ಳಾಟ ಬಿಡು ನಾರಿ ॥೧॥ ಮೂಲೋಕವಂದ್ಯನು ಶ್ರೀ ರಾಮ । ಶಿಷ್ಟ।
ಪಾಲಕ ಮೇಣ್‌ದುಷ್ಟನಿರ್ನಾಮ ॥ ಬಾಳಲರಿದು ಹಗೆಗೈದೆಮ್ಮ । ಈ ।
ಖೂಳತನವ ತೆಗೆಯಿದು ನೇಮ ॥೨॥ ನಾರಿಹತ್ಯೆಯ ಗಯ್ಯೆ ಮನಸೊ
ಲ್ಲ । ದಿಂತು । ಸಾರಿದೆ ಸಮರ ಕಂಜಿದುದಲ್ಲ ॥ ಮೀರಿದರೆನಗೆ ಪಾತಕ
ವಿಲ್ಲ । ಯಮ । ನೂರ ಸೇರಿಪೆ ಹಿಡಿಹಿಡಿಬಿಲ್ಲ ॥೩॥

ರಾಗ ಸುರುಟಿ ಏಕತಾಳ

ಗಳಹದಿರೆಲೊ ಜನ್ನ । ಕುದುರೆಯ । ಕಲಹದಿ ಗೆಲಿದೆನ್ನ ॥ ಕೊಳಲಾಗದ
ಬಾಯುಲುಹಿದು ಶತ್ರುಹ । ತಿಳಿದೆನು ನಾ ನಿನ್ನ ॥೧॥ ಬಲ್ಲೆಸು ರಾಘ
ವನ । ಸುವ್ರತೆ । ನಲ್ಲೆಯ ತೊರೆದವನ ॥ ಖುಲ್ಲನನುಜ ನಿನ । ಗೆಲ್ಲಿಯ
ಹೆಂಗೊಲೆ । ಸೊಲ್ಲಿಸು ಮಗುಳುದ । ರಲ್ಲಿ ದುರಣಕಣ ॥೨॥ ಕಲಹ
ಕೊದಗಿನಿಂದ । ಕ್ಷತ್ರಿಯ । ಬಿಲುವಿಡಿದೈತಂದ ॥ ಅಳವಿಗರ್ಯೂರನು ।
ಕೊಲಬಹುದಿದಿರಪ । ಕಲಿತನವಿರೆ ಕೈ । ಕೊಳುಶರವೃಂದ ॥೩॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ಕಡುಗಿ ಕೆಂಗಿಡಿಯುಗುಳಿ ಶತ್ರುಹ । ನುಡಿದನಿದು ಕೆಡುಗಾಲ ಚಾಪವ ॥
ತುಡುಕು ದೋಷಗಳಿಲ್ಲ ದುಷ್ಟೆಯ ಮಡುಹಲಿನ್ನು ॥೧॥ ಎನುತ ಭಾರಿ
ಯ ಬಾಣವೃಷ್ಟಿಯ । ಕ್ಷಣದಿ ಸುರಿಸಿದನೊಡನೆ ಕಡಿದದ । ಕಣುಗಳಲಿ
ಕಿಡಿ ಸೂಸು ತೆಂದಳು । ವನಜ ನೇತ್ರೆ ॥೨॥ ಕರೆಸಿಕೊ ಪುರಹರನ
ಬ್ರಹ್ಮನ । ಬರಿಸು ಬಲಕೆಂದೆನುತ ಚಾಪಕೆ ॥ ತ್ವರಿತದಲಿ ಶಾಂಭವಿಯ
ಶಕ್ತಿಯ । ನಿರಿಸಲಾಗ ॥೩॥

ಭಾಮಿನಿ

ಕೇಳು ರತ್ನ ಪ್ರಭಯೆ ಬಲು ದೈ । ತ್ಯಾಳಿಯನು ಸಂಹರಿಸೆ ದೇಹವ ।
ತಾಳಿದಚ್ಯುತ ರಾಮನಲಿ ಹಗೆ ಶೀಲವಲ್ಲವಿತಿ ॥ ಕಾಳಗದಿ ಜಯವಿಲ್ಲ
ಸ್ನೇಹದಿ । ಪಾಳಯವ ದುನ್ನಿಸುವುದೆನುತಲಿ । ಸೂಳಯಿಸಿ ತಾಶ
ವಾಣಿಯು ಪೇಳಲೇನದನು ॥೧॥

ರಾಗ ಕಾಂಬೋಧಿ ಝಂಪೆತಾಳ

ಅಶರೀರ ವಾಕ್ಯವದ । ಬಿಸಜಲೋಚನೆ ಕೇಳಿ । ವ್ಯಸನದಿಂಶರ ಚಾಪ
ವಿಳುಹಿ ॥ ಕುಸಿದೆಂದಳ ಬಲೆ ಯೋ । ಚಿಸದೆ ಪೂರ್ವಾಪರವ । ಜಸವಳಿ
ದುದಕಟಗಳಹಿ ॥೧॥ ಆ ಕೆಟ್ಟ ಹಯವಿಲ್ಲಿ । ಗೇಕೆ ತಾನ್ಯೆ ತಂದು । ದೇಕೆ
ಕಟ್ಟಿದೆ ದುಡುಕಿ ನಾನು ॥ ಕಾಕುತನ ವಾಯ್ತೆನುತ । ವ್ಯಾಕುಲದೊಳಿರೆ
ಶತ್ರು। ಹಾಖ್ಯ ಸಂತೈಸುತುಸುರಿದನು॥೨॥ ಚಂದಿರಾನನೆ ಲೋಕ।ವ್ವಂದ್ಯ
ಮಯ ಹೆಣ್-ಗಂಡು । ಒಂದು ಮತ್ತೊಂದರಂಗವಲೆ ॥ ಸಂದ ಕರ್ತ
ವ್ಯ ಬೇ । ರೆಂದಿದೆಯತಿಕ್ರಮಣ । ಹೊಂದಲಪರಾಧ ಕೇಳಬಲೆ ॥೩॥
ಕನ್ನೆ ನೀನಧಿರಾಣಿ । ಯೆನ್ನಿಸುತ ತಾಯಾಗ । ದೆಣ್ಣುತಿಹೆ ಕೇಡ ಸ್ತ್ರೀ
ಕುಲಕೆ ॥ ಗಣ್ಯರಾಚರಣೆ ಸಾ । ಮಾನ್ಯರನು ಕರಣೆ ಯಾ । ಗ ನ್ಯಾಯ
ವಹುದಿಳಾ ತಲಕೆ ॥೪॥ ಈ ದೋಷ ಪರಿಹಾರ । ವಾದಪುದು ರಾಘ
ವನ । ಪಾದವನು ನೋಡು ಬಾ ಮುಖಕೆ ॥ ಕಾದಿದುದು ಕರ್ತವ್ಯ ।
ಖೇದವೇತಕೆ ಬಿಡು । ಮೋದದಿಂಹಯವ ಸಾಂಪ್ರತಕೆ ॥೫॥

ವಾರ್ಧಿಕ

ಎಂಬ ನುಡಿ ಕೇಳಿ ಮನ ತುಂಬಿ ಬರೆ ಬಳಿಕಾ ನಿ । ತಂಬಿನಿಯು ಪುರ
ದಿಂದ ಮುಖತುರಗ ಕಾಣಿಕೆ ಗ । ಳಂಬರಿಸಿ ವಿನಯದಿಂ ಶತ್ರುಹನ ಪದ
ಕಿರಿಸಿ । ಕಂಬನೆಯೊಳ್ಳೈದೆ ನಮಿಸಿ ॥ ಎಂಬುದೇನಜ್ಞಾನದಿಂದುಡುಕಿದೆನು

ಕೂರ್ಮೆ । ಯೆಂಬು ನಿಧಿ ತವ ಜಾತೆಯೆಂಬೆಣಿಕೆಯಲಿ ಮನ್ನಿ । ಸೆಂಬ ಬಲೆಯಂ ದಯದಿ ಸಂತೈಸಿ ಪೊರಮಟ್ಟ । ನಂಬುಜಾಕ್ಷಾವರಜನು ॥೧॥

ರಾಗ ಕೇದಾರಗೌಳ ಝಂಪೆತಾಳ

ದಂಪು ನಡೆದು ಮಖ ಹಯ । ಪೊಗಲು ಮುಂ । ಕೊಂಡು ಡಿಂಡೀರಟ ವಿಯ ॥ ಅಂಡಲೆಯುತಿಹ ನೋಃರುವ । ಕಂಡನುಕ । ರಂಡಕನೆನುವ ದಾನವ ॥೧॥ ಅರರೆ ತುರಗವದಾವುದು । ನಾಸಿಕವ । ಬಿರಿವ ಸರವಾಸ ನೆಯಿದು ॥ ಹರನು ಕರುಣದೊಳಿತ್ತುದು । ಪಾರಣೆಯ । ವಿರಚಿಸುವೆ ನೆನುತ ನಲಿದು ॥೨॥ ಕ್ಷಣದೊಳೆಳೆದು ಹಯವ । ಓದುತ್ರಲಿ । ಪಣೆಯ ಪಟ್ಟಿಯ ಲಿಖಿತವ ॥ ಕಣುಗಳಲಿಳಿಸಿ ಕೆಂಡವ । ಇವನೆ ಎ । ನ್ನನುಜ ಲವಣನ ಕೊಂದವ ॥೩॥ ಸಿಕ್ಕಿದನು ಕೊಂದಿಕ್ಕುತ । ಮಿದು ಮಾಂಸ । ಮುಕ್ಕಿ ನಲಿಯುವೆನೆನ್ನುತ ॥ ಒಕ್ಕಣಿಸುತುರಿಯುಕ್ಕುತ । ವಾರುವಕೆ । ರಕ್ಕಸರ ಕಾಪಿಕ್ಕುತ ॥೪॥ ಮೃತ್ಯುವಂತುಲಿದೇಳುತ । ರಿಪುಬಲವ । ತುತ್ತುಗೈದನು ಕೊಲ್ಲುತ । ಶತ್ರುಹನ ಬಲವೋಡುತ ॥ ಲಿರಲಾ । ಮರು ತ್ತನೆಯ ತಡೆಯೆ ದೈತ್ಯ ॥೫॥

ರಾಗ ಶಂಕರಾಭರಣ ಮಟ್ಟೆತಾಳ

ಯಾರು ಕಪಿಯೆ ತೊಲಗು ಎಮ್ಮ । ಪಾರುಪತ್ಯಬೇಡ ನಿಮ್ಮ ॥ ಧಾರುಣೀಶನೆಲ್ಲಿ ಮೊದಲು ತೋರಿಸೆಂದನು ॥೧॥ ಧಾರಿಣೀಶನ್ಯಾಕೆ ಯಮನ । ತೋರಿಸುವೆನು ಹನುಮನೆನುತ ॥ ಭಾರಿ ಶಿಲೆಯೊಳಿಟ್ಟನಾ ಸ । ಮೀರ ತನೆಯನು ॥೨॥ ದೃಢದ ಹಸ್ತದಿಂದಲಸುರ । ಪಿಡಿದು ತಿರುಗಿ ಬಡಿಯೆ ಹನುಮ ॥ ಪೊಡವಿಗುರುಳುತಿದ್ದನೇನ । ನುಡಿವೆ ಸತ್ವವ ॥೩॥ ಜ್ವಲಿಸಿ ಪ್ರಳಯದನಲನಂತೆ । ಬಲಿದು ಮುಷ್ಟಿಯಿಂದ ಖಳನ ॥ ತಲೆಯನೆರಗ ತಿರುಗಿ ಬೀಳು । ತಿಳೆಯೊಳಾಕ್ಷಣ ॥೪॥ ಎದ್ದು

ಮಾಯದಿಂದ ನಭದೊ । ಳಿದ್ದು ಸರಳ ಮಳೆಯಗರೆದ ॥ ಹೊದ್ದಿತಂ ಧಕಾರವವನಿ । ಯುದ್ಧದಗಲಕೆ ॥೫॥

ಭಾಮಿನಿ

ಸಿಡಿಲು ಮಿಂಚುಗಳೊಡನೆ ಕಲ್ಪದ । ಕಡೆಯ ದಿನವೆನೆ ಕಡಿದು ರುಧಿರದ ಝಡಿ ಮಳೆಗಳುರುಳಿದುದು ಮತ್ತಡಿಗಡಿಗೆ ಬಿರುಗಾಳಿ ॥ ಪೊಡವಿ ನಡುಗಿತಿದೇನೆನುತ ಗರ । ಹೊಡೆದ ತೆರಪಡೆಯೊರಗೆ ಶತ್ರುಘ । ನಡಿ ಗೆರಗಿ ಭರತಾತ್ಮ ಸಂಭವ ನುಡಿದ ಖಾತಿಯಲಿ ॥೧॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ತಾತ ಬಿಡು ಬಿಡು ಭಯವ ಸುಭಟ । ವ್ರಾತ ಧೈರ್ಯವ ತಾಳಿರೀ ಮಾ । ಯಾತಿಶಯವನು ಹರಿಪೆ ನಾಕ್ಷಣ । ಮಾತ್ರದೊಳಗೆ ॥೧॥ ಎನುತ ರಾಮನ ನೆನೆದು ಭಾರಿಯ । ಧನುವಿಗಾಮಹ ತಪನ ಶರವನು । ಅನು ಗೊಳಿಸಿ ಮಗುಳೆಳೆದು ಬಿಟ್ಟನು । ಕನಲುತಾಗ ॥೨॥ ಕಡಿದು ಕತ್ತಲೆ ಸಿಡಿದು ಸುರಿಮಳೆ । ರಭಡಿವ ಜಂಝಾವಾತವಡಗಿತು । ಕಡು ದುರುಳ ದಾನವನನಿಟ್ಟನು । ಪಡಿಶರದಲಿ ॥೩॥ ಶರಹತಿಗೆ ಬೊಬ್ಬಿಡುತ ದಾನವ । ಕೆರಳಿ ಹೆಬ್ಬುಲಿಯಾಗಿ ಬಾಯ್ದೆರೆ । ದೊರಲಿ ಚರಲಿನ ಸುತನು ಮುಷ್ಟಿ ಯೊಳೆರಗಿ ಕೆಡೆದ ॥೪॥ ಕಡುಗಿ ಖಳ ಭಲ್ಲೂಕ ರೂಪದಿ । ಗುಡುಗುಡಿ ಸುತ್ತೆ ತಂದ ಜಾಂಬವ । ಬಡಿದು ಕೆಡಹಿದನವನು ಮಾಯೆಯ । ನುಡಿ ಯಲೇನು ॥೫॥

ಭಾಮಿನಿ

ಇಂತು ಉರ್ವರೆಯಖಿಲ ದುರ್ಧರ । ಜಂತುರೂಪದಿ ಕಾಡಿ ಸೋತಾ । ನಂತರದಿ ಖಳ ಗುಡುಗಿ ನಿಜರೂಪಾಂತು ಶರತತಿಯ ॥ ಪಂಥದಿಂದಲಿ ಸುರಿಸುತೈತರ । ಲಂತರಿಸದಾರ್ಭಟಿಸಿ ಪುಷ್ಕಳ । ಕಂತು ಹರ ಬಾಣದಲಿ ಕರ್ಬುರ ತಿಂಥಿಣಿಯ ತರಿದ ॥೧॥

ಕಂದ ಪದ್ಯ

ಅಳಿದುಳಿದೋರ್ವಂ ಓಡುತ । ಖಳಸತಿಗೆರಗುತ ಕಂಬನಿಯಿಳುಹುತ ಲೆಂದಂ ॥ ಬಲ ಸಹಿತನುವರದೊಳು ರಘು । ಕುಲಜನೊಳ್ಕಡಿದಂತವ ಕಾದಲ ತಾನೆನುತಂ ॥೧॥

ರಾಗ ನಾದನಾಮ ಕ್ರಿಯೆ ಅಷ್ಟತಾಳ

ಮಡಿದ ವಲ್ಲಭನೆಂಬುದನು ಕೇಳಿ । ಎದೆ । ಹಿಡಿದೂರ್ಧ್ವಮುಖಿ ಮೂರ್ಛೆಯನು ತಾಳಿ ॥ ಕಡಿದು ಬಿದ್ದೇಳುತಲಿಳೆಯಲಿ । ನೆಲ । ನೊಡೆ ವಪ್ಪೋಲಳಲುತ ಬೊಬ್ಬಿಡುತಲಿ ॥೨॥ ಎನ್ನೊಳೇನ್ ಕೊರೆಯ ನೀ ಕಂಡೆಯ । ಬರಿ । ದಿನ್ನು ಕೈ ಬಿಡುವರೆ ಗಂಡಯ್ಯ ॥ ಮನ್ಮಥನಾಟ ಕಿನ್ಯಾರಯ್ಯ । ಸತ್ತೆ ।ನೆನ್ನುತ ಹೊಡೆದು ಬ್ಯಾ ಮಂಡೆಯ ॥೩॥ ಬದು ಕಲಾನೆಂತು ಈ ಬುವಿಯೊಳು।ಸಾಯು । ವುದೆ ಸರಿ ಯದಕಿಂತ ಮೊದ ಲೊಳು ॥ ವಧಿಸಿದವನ ಕೊಂದೀಕ್ಷಣದೊಳು । ಕುದಿ । ಕುದಿಸುತಡಗ ನುಂಬೆ ವಂದದೊಳು ॥೪॥

ರಾಗ ಘಂಟಾರವ ಅಷ್ಟತಾಳ

ಎಂದು ರೋಷದಿ ಬಂದತಿ ದೂರದಿ ॥ ನಿಂದು ರಘುಜನ ಬಲದಿ ಮಾಂಡವಿ । ಕಂದನಂದವ ಕಾಣುತ ॥೧॥ ಅರರೆ ಬೇಷ್ ಭಲ ಪುರುಷ ರೊಳೀರೂಪ ॥ ಧರೆಯೊಳೆಲ್ಲಿಯು ಕಾಣೆನೆಂದಾ । ದುರುಳೆ ಸ್ಮರಹತಿ ಯಿಂಗಲಿ ॥೨॥ ಕೊಂದು ಪೋಪೆನು ಸದನ ಕೀತನನೆನ್ನ ॥ ಗಂಡನಾಗಿಸಿ ಸುಖಿಪೆನೆಂದಾ । ದಿಂಡೆ ಮಾಯಕದಿಂದಲಿ ॥೩॥ ಅಂಧಕಾರವನೆಸಗಿ ಸುಂಟರಗಾಳಿ ॥ ಯಂದಿಂ ಪುಷ್ಕಳನ ನೆಗಹುತ । ಸಂದು ಬಾಂದಳ ಮಾರ್ಗದಿ ॥೪॥ ಬರಿಸಿ ನಿದ್ದೆಯ ಮರಳಿ ಪೂರ್ವ ಪ್ರಜ್ಞೆ ॥ ಬರದ ತೆರ ದಲಿ ಕರಿಸಿ ಮಾಟವ । ದುರುಳೆ ತಾಗುಹೆಗೊಯ್ಯುತ ॥ ೫ ॥

ಕಂದಪದ್ಯ

ಇಳುಹುತ ದುಸ್ತರ ಗವಿಯಂ । ನಳನಳಿಸುವ ನಂದನವಂಗೊಳಿಸುತ ಜವದಿಂ ॥ ತಳೆಯುತ ದಿವ್ಯಾಕೃತಿಯಂ।ಚಲುವನ ಮುಗುಮುಗುಳೀಕ್ಷಿಸು ತಲಿ ನಲಿದೆಂದಳ್ ॥೧॥

ರಾಗ ಸುರುಟಿ ಏಕತಾಳ

ಎಂಥ ಚಲುವ ಹಹವಾ । ಎಳೆರವಿ । ಯಂತೆ ಪ್ರಕಾಶಿಸುವ ॥ ಕಂತು ವೊಕೂಬರನೆಂತೆಂಬನೊ ಜ । ಯಂತನೊ ಮುಗುಳಿ ವಸಂತನೊ ತಾನಿವ ॥ ಎಂಥ ॥೧॥ ಪತಿಯಳಿದಿಹುದೊಂದು । ನೋಡಲು । ಹಿತ ವಾಯ್ತೆನಗಿಂದು ॥ ಅತಿಬಲನೊಳು ಮನುಮಥನಾಟದಿಸನು । ಮತ ದಿಂ ಪ್ರತಿಕ್ಷಣ ಹತಿಸಲಿಕಾದುದು ॥೨॥ ಗಾಢಾಲಿಂಗನದಿ । ಕುಣಿಕುಣಿ । ದಾಡುತಸುರೆ ॥ ಕ್ಷಣದಿ ॥ ಮೋಡಿಗಳಚಿಕಲಕೋಡಲು ಭಾರತ । ನಾಡಿ ಸುತೆವೆಗಳ ನೋಡುತ ನಾಲ್ಬದಿ ॥೩॥

ಭಾಮಿನಿ

ಪರಹರೇನಾಶ್ಚರ್ಯವೀವನ । ಸಿರಿಯು ಬಣ್ಣಿಸಲರಿದು ಸುಮಫಲ । ಭರಿತ ತರುಲತಯುಗ್ಮ ಖಗಮೃಗಮಿಥುನವದುಭುತವು ॥ ಧರೆಯೊಳೊಂದಿನ್ನೊಂದರಾಸರೆ । ಹೊರತು ಬಾಳಲ್ಕರಿದು ನಾನೀ । ಗರಿಯ ಲೊಂಟಿಗ ಬದುಕಲೆಂತುಟೊ ಸ್ಮರಹತಿಯೊಳೆಂದ ॥೧॥

ವಾರ್ಧಿಕ

ಅತ್ತನಿಜಮೋಹರದಿ ಪುತ್ರನಂ ಕಾಣದರ । ಸುತ್ತಿರುವ ಶತ್ರುಹಗೆ ಬಿತ್ತರಿಸಿ ತಾಕಾಶ। ಮತ್ತದಾನವಿಯೊಯ್ದುಳುತ್ತರದಿ ತೋರುವ ಮ । ಹತ್ತರದ ಗುಹೆಯೊಳಿರಿಸಿ ॥ ಚಿತ್ತಪಲ್ಲಟಗೈದು ಚಿತ್ತಜನ ಕೇಳಿಗಳ । ಸುತ್ತಿಹಳು ಬರಿದಲ್ಲಿ ಹೊತ್ತುಗಳೆಯದಿರೆನುತ । ಮೃತ್ಯುವೆನೆ ಬಲಸಹಿ ತಲತ್ತ ಪೊರಪಂಟನು ಸುಮಿತ್ರಾತ್ಮ ಭವನಿತ್ತಲು ॥೧॥

ರಾಗ ಮಿಶ್ರಮಾಧವಿ ತ್ರಿವುಡೆತಾಳ

ಬಂದಳಸುರೆ ತೋಷದಿಂದಲೆಯುತಲಿ । ಮಂದಹಾಸದೊಳಂಚಿಯಂದ
ಗತಿಯಲಿ । ತಂದೀರ್ಪ ಹದಿಹರೆಯದ ಮಿಂಚುತಲಿ । ಚಂದನ ಮೃಗ
ಮದಗಂಧ ಬೀರುತಲಿ ॥ ಸುಂದರನ ವಶಗೈವೆ ನಿಮಿಷದೊ । ಳೆಂದು
ಪೇರುರ ಮುಂದೆ ಚಾಚುತ । ನಿಂದವಳ ಮೊಲೆಯಂದ ವೀಕ್ಷಿಸಿ ।
ಬೆಂದು ಪುಷ್ಕಳನೆಂದ ಮನದಲಿ ॥ ಬಂದ ॥೧॥

ರಾಗ ಕಾಪಿ ಅಷ್ಟತಾಳ

ಭಲರೆ ಏನಿದುವೆ ಸೌಂದರ್ಯ। ದ್ಯುತಿ । ಬೆಳಗುವಂಗದ ಹೊಳೆಹೊಳೆ
ಸೌಕುಮಾರ್ಯ ॥ ಇಳೆಯೋಳಿಪರಿ ಸೊಬಗರಿಯ । ಲಿಲ್ಲೀ ।
ಹಳುವದೊಳೆನಗೀಕೆ ದೊರೆತುದಾಶ್ಚರ್ಯ ॥೧॥ ಧರೆಯಲಾವಣ್ಯವ
ನೆಲ್ಲ । ತೆಗೆ । ದೆರಕಹೊಯ್ದಿವಳ ನಿರ್ಮಿಸಿದಕಬ್ಬಿಲ್ಲ ॥ ಬೆರೆಯದೀಕೆಯ
ಬದುಕಲ್ಲ । ಎಂದಾ । ತರುಣಿಯನಡ್ಡೈಸಿ ಒರೆದನೀಸೊಲ್ಲ ॥೨॥

ರಾಗ ಬೇಗಡೆ ತ್ರಿವುಡೆತಾಳ

ನಾರಿ ನಿಲ್ ನಿಲ್ ವಿಮಲೆ। ನೀನ್ಯಾರು ವೈ । ಯ್ಯಾರಿ ಕುಸುಮಕೋಮ
ಲೆ ॥ಪಲ್ಲ॥ ನಾರಿ ನಿಲ್ ಬಿಸಜಾರಿ ಮುಖಿ ಝಷ । ದೇರನುರು ಕೈ
ವಾರಿ ಮಿಗೆ ಸಿಂ। ಗಾರಿ ಬಲು ಖುಷಿಯೇರಿ ಕರುಣೆಯ । ದೋರಿ
ನಿನ್ನಯ ಊರ ಸಾರೆಲೆ ॥ಅ.ಪ.॥ ನಾಮವೇನ್ ಸುಗುಣೆ ನಿನ್ನ । ಪೆತ್ತಿ
ರುವಸು । ದಾಮರ್ಯ್ಯಾರುಹು ಚಿನ್ನ ॥ ಕಾಮದ । ವಿಷವೇರುತಿದೆ ನೀ ।
ಪ್ರೇಮದ । ಸುಧೆಯೆರೆದು ಪೊರೆ ನೀ।ಸ್ಸೀಮದ । ಚೆಲುವೆನಿಪ ವಿಷ
ಯಾ । ರಾಮದ ॥ ಸುಖಸಾರದ ॥ ರಾಮಣೀಯಕ ರತಿಗೊಳದಿ
ನೀ।ಸ್ಸೀಮ ದಿಂದೀಜಾಡೆ ಮನ್ಮನ । ಕಾಮನೆಯ ಸ್ವಾಮಿನಿಯೆ ಕರು
ಣದಿ । ನೀ ಮುದದಿ ಬಾ ತಾಮರಸಮುಖಿ ॥ ನಾರಿ ॥೧॥ ಜಾರಿತು

ಮಿಗವೆನುತ । ನಕ್ತಂಚರ । ನಾರಿ ಮನದೊಳುಬ್ಬುತ ॥ ಸಾರುತ । ಸ
ನ್ಮೋಹನದ ಬಳಿ । ಸೇರುತ ।ಆನನದಿ ಕಿರುನಗೆ । ಬೀರುತ ।ಉಂಗು
ಟದೊಳವನಿಯ । ಗೀರುತ । ಪೇಳಿದಳೆರಗುತ ॥ ಧೀರನಾಸುರ ನಾರ
ವಧು ಸಂ।ಚಾರಕೈದಿದೆ ನೀ ರಸೆಗೆ ನೀ । ನ್ಯಾರಸುತ ನಿನ್ನಾರ ನಾಮ
ವ । ಸಾರೆನಲುಸ್ಮೃತಿಹಾರಿ ಭಾರತ ॥೨॥

ರಾಗ ಮಧುಮಾಧವಿ ತ್ರಿವುಡೆತಾಳ

ಮಾದಳಾಧರೆ ಕೇಳು ನಾನ್ಯಾ । ರಾದರೇನತ್ಯಧಿಕ ಬಲ್ಲಿದ । ಕಾದಲನು
ನಿನಗೆಂದು ತಿಳಿಯು । ನ್ಮಾದಕಾಂಗಿ ॥೧॥ ಗಂಡ ನೀನಹೆಯಾದರೆ
ಸ್ನಯ । ದುಂಡುಕುಚಗಳನಮುಕು ಚುಂಬಿಸು । ಗುಂಡಿಗೆಯ ಬಿಗಿ
ದಪ್ಪು ಬಾಬಾ । ಗಂಡುಗಲಿಯೆ ॥೨॥ ಎನಲಿವನು ಮತ್ತಿನಲಿ ಮುಂ
ಬರಿ । ವನಿತರಲಿ ಪುಟನೆಗೆದು ದಾ।ನವಿ । ಘನಜವದಿ ಬಿಗಿದಪ್ಪುತಲಿ
ಚುಂ । ಬನದ ಮಳೆಯ ॥೩॥

ವಾರ್ಧಿಕ

ಸುರಿಸುತುಭಯತರು ಮೈಮರೆದಿರಲ್ಕ ನಿತರಲಿ । ಭರತಾವರಜ
ಬಂದು ನಿರುಕಿಸುತ್ತಿದನು ಮುಂ । ದರಿದು ಕೋಪದಿ ಹನುಮನುರುವ
ಜ್ರ ಮುಷ್ಟಿಯಿಂದೆರಗಿದಂ ದಾನವಿಯನು ॥ ಕರಹತಿಗೆ ಮಾಯಕದ
ಪೊರೆಗಳಚಿ ದುರುಳೆ ಸ । ತ್ಪುರುಳಿದಳು ಗಿರಿಯೆನಲ್ ಪರಿಕಿಸುತ
ಪುಷ್ಕಳಂ । ಮರಳಿ ಪೂರ್ವ ಸ್ಮರಣೆ ಧರಿತ ಲಜ್ಜೆಯಲಿ ಬಂ।ದೆರಗಿದಂ
ಕಿರಿಯಯ್ಯಗೆ ॥೧॥

ಭಾಮಿನಿ

ಸುರರರಲ ಮಳೆಗರೆದರಣುಗನ । ಕರುಣದಿಂಮನ್ನಿಸುತ ಶತ್ರುಹ ।
ಪೊರಟ ಪಡೆಸಹ ತುರಗ ಕುಂಡಲ ಪುರದ ನಂದನವ॥ ತ್ವರಿತದಿಂದೊಳ

ಪ್ರೊಕ್ಕ ದೀಕ್ಷಿಸಿ । ಚರರು ಹಯವೆಲ್ಲಿಯದು ದೂರದಿ ।ಬರುವುದಾರದೊ ದೆಂದು ಮಹದಚ್ಚರಿಯಿದೆಂದೆನ್ನುತ ॥೧॥

ರಾಗ ಕಾಂಬೋಧಿ ಝಂಪೆತಾಳ

ಮತ್ತೆಹಯದೆಡೆಗೈದಿ । ನೆತ್ತಿಯಲಿ ಬಿಗಿದಿಹ ವಿ। ಚಿತ್ರದೋಲೆಯ ಬಿಡಿಸಿಕೊಂಡು ॥ ಎತ್ತಲೈದವ ತೆರದೊ । ಳಿತ್ತು ಕಾವಲನೊಡೆಯು । ನತ್ತಸಾಗಿದರು ಭಯಗೊಂಡು ॥೧॥ ಧರಣೇಂದ್ರ ಸುರಥ ವಿಷ್ಟರದೊ ಳೊಪ್ಪಿರೆ ಚರರು । ಶಿರವಬಾಗುತಲಂ ಘ್ರಿಯುಗಕೆ ॥ ಕರವ ಜೋಡಿ ಸುತೆಂದ । ರೊರೆವುದೇನ್ ಪೊಸತೊಂದು । ತುರಗಬಂದಿಹುದೆಮ್ಮ ಪುರಕೆ ॥೨॥ ಅಂಗಾಂಗದಲಿ ಹೇರು ಭಂಗಾರವಿಹುದಾತು । ರಂಗಮದ ಹಣೆಗೆ ಬಂಧಿಸಿದ ॥ ಸಿಂಗಾರ ಪಟವೆನುತ । ತುಂಗವಿಕ್ರಮಗೀಯೇ। ಸಂಗತಿಯ ನೃಪತಿ ವಾಚಿಸಿದ ॥೩॥

ವಾರ್ಧಿಕ

ಶ್ರೀಮತ್ಸಮಸ್ತ ಬಿರುದಾಂಕಿತಂ ಧರಣೀ ಮ । ಹಾ ಮಂಡಲೇಂದ್ರ ನಿಕ್ಷ್ವಾಕುಕುಲ ಸಾಕೇತ । ಧಾಮನಾ ದಶರಥ ನೃಪಾತ್ಮಭವ ಜಾನಕೀ ರಾಮಂ ರಣಾಗ್ರ ಭೀಮಂ ॥ ತಾಮಖವ ನೆಸಗಿ ಬಿಟ್ಟಿಹ ವಾಜಿ ಮಿಡು ಕುಳ್ಳ । ಭೂಮಿಪರು ಕಟ್ಟುವುದು ಕಟ್ಟಿದರು ಕಪ್ಪವಂ।ನೇಮದಿಂದಿತ್ತು ಬಲವಹುದಿದರ ಜೊತೆಗೆ ನಿಸ್ಸೀಮ ಶತ್ರುಹನೀರ್ಪನು ॥೧॥

ಭಾಮಿನಿ

ಇಂತಿರುವಲಿಖಿತವದ ಕಂಡ । ತ್ಯಂತ್ಯ ಹರುಷದಿ ರಾಘವೇಂದ್ರನ । ಅಂತರಂಗದಿ ನಮಿಸಿ ಭೂಪತಿ ಮಂತ್ರಿಗಳಿಗೆಂದ ॥ ಸಂತಸದ ದಿನ ವಿಂದು ಪುರದಾ । ದ್ಯಂತ ಸಿಂಗರ ದೇವತಾರ್ಚನ । ಯಂತಳುವದೆಸ ಗಲ್ಕೆ ನೇಮಿಪುಸಂತರಿಸದೆಂದು ॥೧॥

ರಾಗ ಮಧ್ಯಮಾವತಿ ತ್ರಿವುಡೆತಾಳ

ಕೇಳಿ ಸಚಿವ ಸಭಾಸದರು ಶ್ರೀ । ಲೋಲ ರಾಘವ ನೆಜ್ಞ ಹಯತಾ।ಕಾಂ ರಿಸಿತೀಯೆಡೆಗೆ ಪುಣ್ಯವ । ಪೇಳಲೇನು ॥ ಧನ್ಯನು ॥೧॥ ತುರಗವನು ಬಂಧಿಸುತ ಸಾಹಸ । ಮೆರೆದು ನೋಯಿಸೆ ಶತ್ರುಹನನೆಳೆ । ತರಳರಳು ವಿಗೆ ಬರುವ ತಾಯೊಲು । ಹರಿಯು ಬಹನು ॥ ಕಾಂಬೆನು ॥೨॥ ಚಿನು ಮಯನ ಕಣ್ದಣಿಯಲೀಕ್ಷಿಸಿ । ಜನುಮ ಸಾರ್ಥಕಗೈದು ಭವ ಬಂ।ಧ ನವ ಪರಿದೊಗೆದುತ್ತಮೋತ್ತಮ । ಘನ ಪದವನು ॥ ಪಡೆವೆನು ॥೩॥

ಭಾಮಿನಿ

ಭರದೊಳಶ್ವವ ತರಿಸಿ ಬಂಧಿಸು । ತರಸ ಸೇನಾಧ್ಯಕ್ಷನನು ಕರ।ದೊರೆದ ನೆರಹಿಸು ಬಲವ ರಾಮಾಪರಜ ಧುರಕೆಂದು ॥ ಬರಿಸಿ ತನ್ನಯ ಪುತ್ರ ಮಿತ್ರಾ।ದ್ಯರಿಗೆ ತಿಳುಹುತ್ತೀರ್ದನತ್ತಲು । ಅರಿತು ಶತ್ರುಹಗೆಂದ ಮಂತ್ರೀಶ್ವರ ಸುಮಂತ್ರಾಖ್ಯ ॥೧॥

ರಾಗ ಕೇದಾರಗೌಳ ಅಷ್ಟತಾಳ

ತುರಗ ಕಣ್ಮರೆಯಾದು । ದರಿತೆ ಕುಂಡಲಪುರ । ದರಸ ಕಟ್ಟಿಹನದನು॥ ಅರಿಗಳಿಗಂಕುಶ । ವರರಾಮ ಭಜಕನು । ಸುರಥನಾಮಕನೆಂಬನು ॥೧॥ ಹಯವ ಬಿಡುವನಲ್ಲ । ಭಯಕೆ ಬಾಗುವನಲ್ಲ । ನಯದಿಂದ ಕಾರ್ಯ ವನು ॥ ಜಯಿಸಬೇಕೆನಲು ಚಿಂ।ತೆಯ ತಾಳಿ ಮನದಿ ಸಂ । ಧಿಯನೆಣ್ಣ ಶತ್ರುಘ್ನನು ॥೨॥ ಕರೆಯುತಂಗದಗೆಂದ । ತುರಗವ ಬಿಡುವುದೆಂ।ದರಸ ಸುರಥನೊಳಿಂದು ॥ ಅರುಹಿ ಸಂಧಿಯಗೈದು । ತ್ವರಿತದಿ ಬಹುದೆಂದು। ಹರಸಿ ಬೀಳ್ಕೊಟ್ಟನಂದು ॥೩॥

ಭಾಮಿನಿ

ತಳಂವದಂಗದ ರಾಜಬೀದಿಯ । ತುಳಿಯುತಿರಲಿಕ್ಕೆಲದೊಳಂಗಡಿ । ಗಳನು ಮುಚ್ಚಲು ಕೆಲರು ಹಲರಾಯುಧವ ತುಡುಕಿದರು ॥ ಎಳೆಯ

ರೀಕ್ಷಿಸಿ ಕವಳಿಕೊಬ್ಬರಿ। ಗಳ ಪಿಡಿದು ನಂಬಿಸುತ ಬರೆ ಮುಂ। ತಳೆದು ತಲುಪುತ ಕುಂಡಲೇಂದ್ರನ ನಿಳಯ ದ್ವಾರವನು ॥೧॥

ಕಂದ ಪದ್ಯ

ಚಾರರೊಳುಸುರಿದ ಪರಬಲ । ವಾರಿಧಿಯಿಂದಂಗದ ತಾ ಸಾರಿಪೆನೆನು ತಂ ॥ ಭೋರನೆ ತಿಳುಹಿರಿ ನೃಪಗೆನು । ತೋರುವ ಬಂದಡಿಗೆರಗುತ ಧಾರಿಣಿಪತಿಗಂ ॥೧॥

ರಾಗ ಕೊರವಿ ಏಕತಾಳ

ಸರಣೂ ಸರಣು ಜೀಯು । ಕಾಪಾಡುವಡಿಯು । ಸರಣೂ ಸರಣು ಜೀಯ ॥ ಸರಣೆನ್ನೊಡೆಯ । ಯಿರೋದಿ ಕಡ್ಯೆಯು ॥ ಬರಾಬ್ರಿದಡಿಯು। ತೆರಳ್ಯೆ ತ್ರೀ ಕಡೆಯ ॥ ಸರ ॥೧॥ ಗಡವನ ಕಂಡ್ಹಂಗ್ಯೆತೆ । ನುಡಿ ಬರುತ್ಯೆತೆ । ಕಡು ಚೋಜ್ಗನಂಗಾಗ್ಯೆತೆ ॥ ಒಡೇರ ಕೂಡ್ಲೇ ಜಂಬ್ರೈತಂತೆ । ಬಿಡಿವಳಗೀಟ ಗಡನಂಬ್ರೈತೆ । ॥ಸರಣು॥೨॥ ಚರರು ಪೇಳಿದ ಮಾತನು। ಲಾಲಿಸಿ ಭೂಪ । ನೊರೆದ ಬಂದಿರುವಾತನು ॥ ಇರಲ್ಯಾವನವ ನೊಳ। ಕರೆಯೆಂದೆನಲವ । ತಿರುಗಿ ಕಳುಹಿವನ । ಚರ ಮುನ್ನಡೆದನು ॥೩॥

ಭಾಮಿನಿ

ಬರಲುಕುಳ್ಳಿರಿಸುತಲಿ ಮತ್ತು ಪ । ಚರಿಸುತಾತಗೆ ನೃಪತಿಕಾರ್ಯಾ । ತರಗಳೇನಾರಟ್ಟಿದರು ನೀನಾರು ಸಾರೆನಲು ॥ ಸುರಪಸುತನಂಗದನು ರಘು । ವರನಮುಖಿಪಯುದೆಂಡನೆ ಬಂದವ । ಇರುವ ಪುರಕಿಷ್ಕಿಂಧೆಯೆನ್ನಯ ಬರವ ಕೇಳೆಂದ ॥೧॥

ರಾಗ ಮಧ್ಯಮಾವತಿ ಅಷ್ಟತಾಳ

ಯಾಗದಶ್ವವನು । ಕಟ್ಟಿಪೆಯುದ । ಕಾಗಿ ಶತ್ರುಹನು ॥ ಸಾಗಿ ವಿಚಾರಿಪುದೀಗನುತಲಿ ಸ್ನೇಹ । ಕಾಗಿಯಟ್ಟಿವನೆನ್ನನು । ಹಯವು ಸಹಿ।ತಾಗಿ

ಯೀವುದು ಹೊನ್ನನು । ಭೂಪತಿ ಮಿತ್ರ।ನಾಗಿ ಕಾಂಬನು ನಿನ್ನನು । ಸ್ವಾಮಿಯ ಕಾರ್ಯ । ಸಾಗಲಿ ತೆರೆ ಕಣ್ಣನು ॥ ನೃಪತಿ ನೀನು ॥೧॥ ಆ ರಘೂದ್ವಹನು । ಮಾನವನಲ್ಲ । ಶ್ರೀ ರಮಾಧವನು ॥ ಧಾರಿಣಿ ಹೊರೆಯ ನಿವಾರಿಸೆ ಮನುಜ ಶ।ರೀರ ವಾಂತವನು।ಕೊಂದನು ದೈತ್ಯ। ವಾರವನಂತವನು ॥ ಅಹಲ್ಯೆಯು । ದ್ಧಾರ ವೃತ್ತಾಂತವನು । ಬಲ್ಲೆಯು ಯಿಂತ । ಪಾರ ದೃಷ್ಟಾಂತವನು ॥ ಗೃಹಿಸು ನೀನು ॥೨॥ ಈ ಲವಣಾರಿಯನು । ಗೆಲ್ಲುವರಿಲ್ಲ । ಕೇಳಿ ನೀನರಿಯೆಯೇನು ॥ ಸೋಲಿಸಿದನು ದೇವ । ಶೈಲ ಯುದ್ಧದಲಿ ತ್ರಿ । ಶೂಲ ಧಾರಿಯನು । ಮಾರ್ಮಿತಿಕ ಬಿಲ್ಲಾಳ್‌ಗಳ ಗೋರಿಯನು । ಸೇರಿಸುತಿಲ್ಲಿ । ಕಾಲಿಟ್ಟ ಸ್ವಾರಿಯನು । ಆನತಪರಿ । ಪಾಲನ ಕಾರಿಯನು ॥ ದ್ವೇಷಿಪರೇನು ॥ ಯಾಗ ॥೩॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ಎಲಪೊಕಪಿಪರ ಸಲದು ನಿನ್ನಯ । ಗಳಹು ತೆಗೆಶ್ರೀರಾಮಚಂದ್ರನು॥ ಜಲಜಲೋಚನನೆಂಬುವನು ನಾವ್ । ತಿಳಿಯದವರೆ ॥೧॥ ಮತ್ತೆಶತ್ರುಹಗಿತ್ರುಹಾದ್ಯರ ಪೃಥ್ವಿಗೊರಗಿಸದಿರಲು ನಮ್ಮನು । ಹೆತ್ತೊಡಲು ಬರಿದಹುದು ಶ್ರೀ । ಹರಿ ಭಕ್ತನಹೆನೆ ॥೨॥ ರಾಘವೇಂದ್ರನ ಪದವ ಕಾಣದೆ । ಯಾಗದಶ್ವವ ಬಿಡೆವು ನಿಮ್ಮಿಂ । ದಾಗದನುವರ ಕರೆಸಿಕೊಂಬುದು । ಬೇಗ ಹರಿಯ ॥೩॥ ಪೌರುಷವ ಬಿಡು ನೃಪತಿ ಹಗೆ ಗೈದಾರು ಬದುಕಿಹರಾದಿ ಮೂರ್ತಿಯ ॥ ವಾರುವವ ಬಿಡದಳಿಯದಿರುನಾ । ಸಾರಿ ಪೇಳ್ದೆ ॥೪॥ ಕದನ ನಿಧನಕ್ಕಂಜಿ ಕಟ್ಟಿದ । ಕುದುರೆಯನು ಬಿಡಲುಂಟೆ ಬಾಹುಜ ॥ ಒದರದಿರು ನಡೆ ತೋರ್ಪೆ ಭುಜಬಲ । ದಧಟನೆಂದ ॥೫॥

ಭಾಮಿನಿ

ದಿಟ್ಟತನವಿನಿ ತಿರಲು ಕದನವ । ಕೊಟ್ಟು ಕಾಂಬುವುದೆನುತ ಲಂಗದ।

ಘಟ್ಟನಲ್ಲಿಂ ಪೊರಟ ದಿನಮಣಿಯಸ್ತಗತನಾದ ॥ ಶತ್ರುಹರಸಿದನರಿತು ಸಮರವೆ। ನುತ್ತ ಸಾರಿದ ಸೈನ್ಯ ಕತ್ತಲು । ಮಿತ್ರನುದಯದೊಳಿತ್ತ ಸುರಥಾತ್ಮಜ ಸುದರ್ಶನನು ॥೧॥

ರಾಗ ಮಾರವಿ ಏಕತಾಳ

ಕರಿರಥ ವಾಯ್ದಳ । ತುರಗ ಮಹರ್ಬಲ । ಪೊರಡಿಸಿ ವಿಗ್ರಹಕೆ ॥ ಭರಿತಾಯುಧಗಳ । ವರಸ್ಯಂದನದೊಳ । ಗಿರಿಸುತ ತಾಯ್ಗ್ರಹಕೆ ॥೧॥ ನಡೆದಾಕೆಯ ಪದ । ಜಡಜಕೆ ವಂದಿಸಿ । ನುಡಿದೀ ವಾರ್ತೆಯನು ॥ ಬಡಬಡಿಸುತ್ತಲಿ । ಪಡೆಯುತ ಹರಕೆಯ । ಮಡದಿಸುಪ್ರಭೆಗಿದನು ॥೨॥ ತಿಳುಹಿಸಿ ತೆರಳುವ । ದೊಳಿತೆನ್ನುತ ಮುಂ । ತಳೆದು ಸುದರ್ಶನನು ॥ ಘಳಿಲನೆ ಬಂದಾ । ನಿಳೆಯಕೆ ಕಾಲಿಡೆ । ಲಲನಾಮಣಿ ತಾನು ॥೩॥

ರಾಗ ಮಧ್ಯಮಾವತಿ ತ್ರಿವುಡೆತಾಳ

ಬರವ ಕಂಡಳು ಬಾಲೆ ನಿರ್ಭರ । ಹರುಷದಿಂದಿರೆದ್ದು ಕಾಂತನ । ಕರ ವಿಡಿದು ಕರೆತಂದು ಕೂಡ್ರಿಸಿ । ಚರಣಕೆರಗಿ ॥ ವಿನಯದಿ ॥೧॥ ಸ್ವಾರಿಯಾಗಮ ಚೋದ್ಯ ಸ್ಯಂದನ । ವೇರಿ ಬಂದುದಪೂರ್ವಕರದಲಿ ॥ ಭಾರಿಧನು ತೂಣೀರ ಬೆನ್ನಿನೊಳೇರಿ ತೇಕೆ ॥ ಸಮರಕೆ ॥೨॥ ಭಾಮಿನೀ ಮಣಿಕೇಳು ವತ್ತಿತ।ರಾಮು ಸೇನೆಯ ಧುರಕೆ ಪೊರಟಿಹ । ನೇಮದಿಂದೈದುವೆನುರಿಪುಬಲ । ಹೋಮಕಾನು ॥ ಧೀರನು ॥೩॥

ರಾಗ ಕಲ್ಯಾಣಿ ಏಕತಾಳ

ಆವ ರಾಮು ಕಲಹವ್ಯಾರೋಳ್ । ಪ್ರಾಣಕಾಂತ ॥ ಕಾರ್ಯ । ವಾವುದೆಮು ತಿಳುಹುದಯದಿ । ಪ್ರಾಣಕಾಂತ ॥ ರಾವಣಾರಿಯಜ್ಞ ದಶ್ವ । ಎಲೆ ಕಾಂತೆ ॥ಕಟ್ಟಿ॥ ಗೈವಸಮರ ಶತ್ರುಹನೊಳು । ಎಲೆ ಕಾಂತೆ ॥೧॥

ರಾಘವೇಂದ್ರನಾದಿ ವಿಷ್ಣು । ಪ್ರಾಣಕಾಂತ ॥ ಮಾವ । ಲೋಗನಾದನೆಂತು ಹರಿಗೆ । ಪ್ರಾಣಕಾಂತ ॥ ತಾಗಿ ಶತ್ರುಹರನ ಕೆಡಹಿ । ಎಲೆಕಾಂತೆ। ಬರಿಸಿ । ನಾಗಶಯನ ನಡೆಯತೋರ್ಪೆ । ಎಲೆಕಾಂತೆ ॥೨॥ ಕಲಹ ಬೇಡ ಕಾಲ ಪಿಡಿವೆ । ಪ್ರಾಣಕಾಂತ । ಅಷ್ಟು । ಸುಲಭವಲ್ಲ ರಾಮಾಗಮನ । ಪ್ರಾಣಕಾಂತ ॥ ಬಲುಹ ನರಿಯದಾದೆಯೇನೆ । ಎಲೆ ಕಾಂತೆ। ಮುಳಿದು । ನಿಲಲು ಮೂಲೊಕಗಳ ಗೆಲುವೆ। ನೆಲೆಕಾಂತೆ ॥೩॥

ಭಾಮಿನಿ

ಬಲವದೆನಿತಿರ್ದಡೆಯು ಮಾನವ । ಗೆಲಬಹುದೆ ಪೇಳ್ ದೈವಶಕ್ತಿಯ । ಕಲಹವಲ್ಲವು ಕಾಂತ ಕುಲಕಿದು ವಿಲಯವೆಂದಳಲು ॥ ಅಳಲಬೇಡೆಲೆ ಪ್ರಮದೆ ಭಕ್ತಿಯ । ಬಲುಹಿಗೆಣೆಯಿಲ್ಲೆನುತ ಪೊರಮಡ । ಲಳುಕದಾ ರತಿಯೆತ್ತಿ ಸೇಸೆಯ ತಳಿದು ಕಳುಹಿದಳು ॥೧॥

ರಾಗ ಘಂಟಾರವ ಅಷ್ಟತಾಳ

ಸತಿಯ ಸೇಸೆಯ ಪತಿಕರಿಸುತಲೈದಿ ॥ ಅತುಲ ಬಲ್ಲದ ಹಿತದಿತನ್ನಯ। ಪಿತಗೆರಗುತಿಂತೆಂದನು ॥೧॥ ತರಳರೀರ್ವೈವರಿರಲು ಬಲಾಢರು ॥ ಧುರಕೆ ನೀನೆ । ಕರಿ ಬಲವ ನು । ಗ್ಗರೆದು ಬರುವೆನು ನಿಮಿಷದಿ ॥೨॥ ಹನುಮನ್ಯಾತಕೆ ತ್ರಿಣಯ ಬಂದರು ಗೆಲ್ವೆ ॥ ನೆನಲು ದಳದೊಡೆ । ತನವನೊಪ್ಪಿಸಿ । ಜನಪ ಕಳುಹಿದ ನಣುಗನ ॥೩॥

ಭಾಮಿನಿ

ಅನುಜರೊಡಗೊಂಡಮಿತ ಸೇನಾ । ವನಧಿ ಮಧ್ಯದೊಳಾಸುದರ್ಶನ । ಮಣಿರಥದಿ ಪೊರವಂಟ ಭಾರಿಯ ಧನುವನೊದರಿಸುತ ॥ ರಣಕೆ ಬರುತಿರುವರಿಯ ಕಂಡಾ । ಕ್ಷಣದಿ ಪುಷ್ಕರನುರು ಚತುರ್ಬಲ । ವಸುಜವದೊಳಣಿಗೊಳಿಸಿ ನಿಂದನುಧ್ವನಿಸಿ ಚಾಪವನು ॥೧॥

ರಾಗ ಭೈರವಿ ಅಷ್ಟತಾಳ

ಭಳಿರ ನೃಪಾತ್ಮಜನೆ । ಭಾಪುರೆ ಮಝು । ಭಲರೆ ಮಹಾಭುಜನೆ ॥ ಕಲಿ ಗಂಜದಿರುವ ಪುಷ್ಕಳ ನಾನು ನಿಮಿಷದಿ । ಗೆಲದಿರೆ ಬಾಹುಜನೆ ॥೧॥ ಬರಿ ಹೊಗಳಿಕೆ ಯಾತಕೆ । ಎನ್ನಯ ಭುಜ । ಸಿರಿಯಸ್ತ್ರ ಸಂಘಾತಕೆ ॥ ತರುಬಿ ನಿಲ್ಲುತಸತ್ವವಿರೆ ಸಣಸುವುದಲ್ಲ । ದಿರೆ ಸಾರೆಲವೊ ಗೃಹಕೆ ॥೨॥ ಸಾರಲೆಂಬುವುದ್ಯಾರಿಗೆ । ಪೊಪೆನೆ ನಿನ್ನ । ಸಾರಿಸದೆಮನೂರಿಗೆ ॥ ಭೋರನೆಮ್ಮಯ ಮುಖವಾರುವವನು ಕೊಟ್ಟು । ಸಾರು ಜೀವದಿ ಪುರಿಗೆ ॥೩॥ ಬುವಿಯೊಳು ಬದುಕಬೇಕೆ । ಶ್ರೀ ರಾಮನ । ತವಕದಿ ಕರೆ ಸುಚೋಕೆ । ಬವರಶಾಪಟರೆಮ್ಮಾಹವದಿ ವಾಳಯುಸಹ । ಜವನೂರ ಸೇರಲೇಕೆ ॥೪॥ ಕರಟವ ನೊಡೆಯುಲಿಕೆ । ವಜ್ರವೆನಿಮ್ಮ । ತರಿದಶ್ವ ಬಿಡಿಸಲಿಕೆ ॥ ವರರಾಮ ಚಂದ್ರ ದೇವರು ಬೇಕೆ ನೋಡೆಮ್ಮ । ಪರಿ ಯೊಂದೆಚ್ಚನು ಕ್ಷಣಕೆ ॥೫॥

ವಾರ್ಧಿಕ

ಮುರಿದದ ಸದರ್ಶನಂ ಮುರಿಶರದೊಳಿಡೆ ಮರಳಿ । ವರುಣವಾಯು ವ್ಯಾಹಿಗರುಡ ತೈಮಿರ ಮಿಹಿರ। ಉರುಭಯಂಕರ ರೌದ್ರಕಂಕಾಲ ಸರ। ಸಿರುಷಭವಬಾಣಗಳಲಿ ॥ ಧುರಪರಾಕ್ರಮಗು ಭಯರುರು ಬಿದರ್‌ಸರಿ ಸಮದಿ । ಕೆರಳಿ ಪುಷ್ಕಳನು ತೆಗೆದಿರಿಸಿದಕ್ಷಯ ಶರವ । ತರಿಯುತಿರೆ ಕವಲಂಬು ಉರವಕೀಲಿಸಿಕೊಡನೆ ಅರಸುಮಗ ಮೈಮರೆದನು ॥೧॥

ಭಾಮಿನಿ

ಕಾಣುತಿದನವನನುಜ ಸುಬಲಸು । ಷೇಣಮುಂತಪ್ಪಷ್ಟಕರುಸು । ತ್ರಾಣದಿಂ ಹೊಯ್ದಾಡುತಲಿ ಭರತಾಣುಗನ ಧುರದಿ ॥ ಕ್ಷೋಣಿಗೊರಗಿದರವನಿಪನ ಕಿರಿ । ಸೂನು ವೀರಸುಧನ್ವ ಕಂಡಿದ । ಬಾಣಮಳೆಗರೆ ದಂದ ನಾರಾಯಣಾನುಜಾತ್ಮಜಂಗೆ ॥೧॥

ರಾಗ ತುರುಷಾವಂತು ಮಟ್ಟೆತಾಳ

ಎಲವೊದುರುಳ ನಿಲ್ಲು ನಮ್ಮ । ಬಲವನೆಲ್ಲವ । ಗೆಲಿದೆಯಾದರೇನುತ್ತಲೆಯ । ನುಳುಹಬಲ್ಲವ ॥ ಜಲಜನೇತ್ರನೊಬ್ಬನವನ । ನಿಲದೆ ಕರೆಯಿಸು । ಇಳೆಯೊಳ್ಯಾವ ಪೆಸರು ನಿನಗೆ । ತಳುವದರುಹಿಸು ॥೧॥ ದುರುಳ ನ್ಯಾವನೆಲವೊ ಮಖದ । ಹರಿಯು ಬಂಧಿಸಿ । ತಿರುಗಿನಿಂದ ಖಳನ ದ್ಯಾರು । ಧುರವ ಸಂಧಿಸಿ ॥ ಶಿರವನಿಳುಹೆ ನಿನ್ನ ನಿಖಿಲಾಧರಣಿ ವಂದ್ಯನ । ಕರೆಸಬೇಕೆ ಪುಸ್ಕಳಾಖ್ಯ ಭರತನಂದನ ॥೨॥ ಭರತ ಜಾತ ಕೇಳು ಸಮರ । ಸರಸವಲ್ಲವು । ಅರಸು ಸುರಥಗಿದಿರು ಮೂರು ಧರೆಯೊಳಿಲ್ಲವು ॥ ವರಸುಧನ್ವನವನ ಕಿರಿಯ । ತರಳನಿರವನು । ಪರಿಕಿಸೆನುತ್ತಲೆಚ್ಚ ನೊಡನೆ । ಭರಿತ ಶರವನು ॥೩॥

ರಾಗ ಮಾರವಿ ಏಕತಾಳ

ಬರುವ ಶರೌಘವ । ತರಿಯುತ ಪುಷ್ಕಳ । ಸುರಿಸುತ ಮಾರ್ಗಣವ ॥ ಅರುಹಿದ ತಂದೆಯು । ಕರಸಿಕೊನೀನನು । ಸರಿಸದೆ ಸುರಗಣವ ॥೧॥ ತಂದೆಯ ಕರೆಯಿಸ । ಲೆಂದೆಯು ಎಲಎಲ । ಹಂದೆಯೆ ನೋಡೀಗ ॥ ಕಂದನ ಕೈಗುಣವೆಂದೆನು ತುರುಶರ । ದಿಂದೆಸೆಯಲಿಕಾಗ ॥೨॥ ಮುರಿದದ ಪುಷ್ಕಳ । ನುರುದಿವ್ಯಾಸ್ತ್ರವ । ನಿರಿಸುತ ಶಿಂಜಿನಿಗೆ ॥ ತ್ವರಿತದಿ ಬಿಡಲವ । ರುರುಬೆಗೆ ಸುರಥಜ । ನುರುಳಿದ ಮೇದಿನಿಗೆ ॥೩॥

ಭಾಮಿನಿ

ಅನಿತಕೆಚ್ಚತ್ತಾ ಸುದರ್ಶನ । ಧನುವನೊದರಿಸುತೆದ್ದು ರೋಷದಿ । ಕಣುಗಳಲಿ ಕಿಡಿಗೆಡಹಿ ಮಾಂಡವಿಯಣುಗಗಿಂತೆಂದ ॥ ಕ್ಷಣದಿ ನಿನ್ನನು ಮಡುಹ ದಿರ್ದಡೆ । ಜನಕಜನನಿಯರಿಂಗೆ ತನಯನೆ । ಬಿನುಗೆ ತಾಳೆಂದೆಚ್ಚನಾರಾಯಣ ಮಹಾಸ್ತ್ರದಲಿ ॥೧॥

ಕಂದಪದ್ಯ

ಆ ಮಹಶರದ ತ್ಯುರುಬೆಗೆ । ವ್ಯೆಮರೆದುರುಳಿದ ಭರತಜ ರಾಮಾವ
ರಜಂ । ಆ ಮಗನಂ ಬಿಗಿದಪ್ಪುತ । ಪ್ರೇಮದಿ ಮಲಗಿಸಿ ತೊಡೆಯೊಳು
ತಾಮರುಗುತ್ತಂ ॥೧॥

ರಾಗ ಸಾವೇರಿ ಝಂಪೆತಾಳ

ಮಗನೇ ನೀ ಮುನಿದಿಂತು । ಜಗತಿಯಲಿ ಮಲಗುವುದೆ । ಸುಗುಣ ಸವಿ
ಮಾತಾಡು ನಗುತೊಮ್ಮೆ ನೋಡು ॥೧॥ ಕುಲಕೆ ನಂದಾದೀಪ । ಛಲಕೆ
ಮೇರುಸ್ವರೂಪ । ಬಲಕೆ ಬಲ್ಲಿದ ಭೂಪ । ಸತಿ ಸುಪ್ರತಾಪ ॥೨॥
ಸುಗುಣ ಸುಂದರ ನಿಂತು । ಆಗಲೆ ಬಾಳ್ವಿನದೆಂತು । ನಗರಕ್ಕೈದುವೆ
ನೆಂತು । ಮೊಗದೋರ್ಪೆನೆಂತು ॥೩॥

ಭಾಮಿನಿ

ಇನಿತು ನಾನಾ ತೆರದಿ ಚಿಂತಿಸು । ವನನು ಕಂಡಲ್ಲಿಗೆ ಸುದರ್ಶನ । ಘನ
ದ ಗರ್ಜನೆಯಿಂದ ಬಂದೊರೆದನು ಪಚಾರಿಸುತ ॥ ವನಿತೆಯರಿಗಿದು
ಸಹಜಬಾಹುಜ । ರಣಕಳುಕಿ ಮರುಗುವನೆ ತೆಗೆತೆಗೆ । ವನಜನಾಭನ
ಬರಿಸು ಸೆಣಸಿದು ನಿನಗೆ ತಗದೆಂದ ॥೧॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ನುಡಿಗೆ ಕಿಡಿಕಿಡಿಯಾಗಿ ಶತ್ರುಘ । ನೊಡನೆ ಧನುಗೊಂಡೆಂದ ನಿನ್ನನು ।
ಪಡುಹೆ ಚಿನುಮಯ ಬೇಕೆ ನಿಲ್ ನಿಲ್ । ಲ್ಲಡಿ ಮಿಡುಕದೆ ॥೧॥ ತಂದೆ
ಯನು ಬರಹೇಳು ಮಿಗೆ ತಮ್ಮಂದಿರನು ಬೆಂಬಲಕೆ ಕರಸಿಕೊ । ಕೊಂ
ದು ಬಿಸುಡುವೆನೆನು ತೆಸೆದಶರ। ವೃಂದವನ್ನು ॥೨॥ ಮುರಿಯುತವಿ
ಯನು ಶರಿಯೆ ಸಿಂಹನ । ಬರಿಸಲೇಕೆಂದುರು ಮಹಾಸ್ತ್ರ ದೊ। ಳೆರಗೆ
ಶತ್ರುಘನೊರಗೆ ನೃಪಸುತ । ಜರೆಯುತೆಂದ ॥೩॥

ರಾಗ ನವರೋಜು ಏಕತಾಳ

ಭಳಿರೆ ಶತ್ರುಘ ಧೀರ । ರಣ । ಕಲಿಯುಹೆ ಭಾಪುರೆ ವೀರ ॥ ಹುಲುಗಳು
ನಾವ್ ಬಲು । ಬಲಿ ನೀನಶ್ವವ । ಚಳಕದಿ ಬಿಡಿಸಿದೆ । ಗೆಲಿದೆನ್ನುವುದರ
ಬಳಿ ॥೧॥ ಕರೆಸಿಕೊ ರಾಮನನೆಂದು । ನಾ । ನೊರೆದರು ಕಾದಲು
ನಿಂದು ॥ ಧರೆಯೊಳು ತನಗಿದಿ । ರಿರರೆಂಬುವ ತುದಿ।ಗರುವವು ಮುರಿ
ದುದು । ಬಿರಿದು ಹರಿದುದು ॥ ಬಳಿಕೆ ॥ ಇನ್ನಾದರ ಚ್ಯುತನ । ಕಡೆ ।
ನೆನ್ನುವೆ ನೀ ಹುಚ್ಚುತನ ॥ ನಿನ್ನಿಂದಸದಳ ವೆಣ್ಣಲಿಕನುವರ । ಚಿನ್ಮಯ
ನೈತರು । ವನ್ನೆಗು ಬಿಡೆ ಕಣಾ ॥ ಬಳಿರೆ ॥೩॥

ಭಾಮಿನಿ

ಕೇಳತೀ ಮೂದಲೆಯನಾಶುಗ । ಬಾಲ ಕಂಡಡಹಾಯ್ದು ಕಲ್ಪದ ।
ಕಾಲರುದ್ರನ ರೌದ್ರದಿಂದ ನೃಪಾಲಸುತಗೆಂದ ॥ ಖೂಳನಿಲ್ಲಿಲವೆಲವೂ
ನಿನ್ನಯ । ಭಾಳಲಿಪಿಯನು ತೊಡೆವೆನೊಮ್ಮೆಗೆ । ತಾಳೆನುತ ತೆಗೆದಿಟ್ಟ
ನೆದೆಗಾಭೀಳ ಮುಷ್ಟಿಯಲಿ ॥೧॥

ವಾರ್ಧಿಕ

ಭಾರಿ ಹತಿಗೊಡೆದು ಕೆನ್ನೀರು ಕಾರಂಜಿಯೆನೆ। ಹಾರಿತೆದೆಯಿಂದ ಮೇಲೇ
ರಿ ನಾಸಿಕ ಮುಖದಿ । ಧಾರಿಣಿಪಸುತ ರುಧಿರ ವಾರಿಯೊಳ್ ದಿಂಡುರು
ಳೆ। ಸಾರಿ ಮೂರ್ಛಾವಸ್ಥೆಗೆ ॥ ಭೂರಿಬಲರಿವನನುಜರೀ ಹರಿಬಕೊದಗಿ
ಕಡು । ವೀರ ಹನುಮನ ತುಡುಕಲೋರಂತೆ ಕೆಡಹಿ ಬಲ । ವಾರಿಧಿಯ
ಬರಿಗೈದ ಚಾರನೋರ್ವಂ ತೆರಳಿ ಸಾರಿದಂ ಸುರಧೇಂದ್ರಗೆ ॥೧॥

ಭಾಮಿನಿ

ಸುತರ ರಣ ಮಂಡಲದಿ ಕೆಡಹಿದ । ಹತಕರಾಯುವ ತೊಡೆಯುದಿರೆ

ನೆಂ । ದತಿ ಮಹಾರೋಷದಲಿ ಪೊರಟನು ವಿತತ ಬಲದೊಡನೆ ॥ ಪೃಥಿ
ಸುತಲಿ ನಡೆತಂದು ಸಂಗರ । ಪೃಥಿವಿಯಲಿ ಮೈಮರೆದು ಬಿದ್ದ । ಪ್ರತಿ
ಮ ಪುತ್ರನನಪ್ಪಿ ಮುದ್ದಿಸಿ ಕ್ಷಿತಿಪ ಹಮ್ಮೈಸಿ ॥೧॥

ರಾಗ ನೀಲಾಂಬರಿ ಆದಿತಾಳ

ಏಳು ಏಳೈ ಮುದ್ದು ಬಾಲಕ । ಏನಾಯಿತೆಂದು।ಹೇಳು ಹೇಳೈ ಧರ್ಮ
ಪಾಲಕ ॥ ಬಾಳು ಬಾಳೈ ಕಾಮ ರೂಪಕ । ಮುನಿಸೇಕೆ ಕ್ಷಮೆ । ತಾಳು
ತಾಳೈ ಕುಲ ದೀಪಕ ॥೧॥ ಕಂದ ಬಾರೆನುಲೆನ್ನು ಕರೆವೆನೆ । ಈ ಮುದ್ದು
ಮುಖವ । ಮಂದ ಭಾಗ್ಯನದೆಂದೂ ಮರೆವನೆ ॥ ಸಂದ ಮಾನವನಾಗಿ
ಮರೆವೆನೆ । ಶ್ರೀ ರಘುರಾಮ । ಚಂದಿರನುತ್ತುಂಗಪಾದ ನೆರೆವೆನೆ ॥೨॥
ಯಾಕೆ ಕಟ್ಟಿದೆ ಮುಖವಾಜಿಯ । ನಿರ್ಭಾಗ್ಯ ಬರಿ।ದೇಕೆ ಹಮ್ಮಿದೆ ಮಹ
ದಾಜಿಯ ॥ ನೂಕಿಕಳೆದೆ ಪುತ್ರ ರಾಜಿಯ । ಸಾಕಿನ್ನು ಬಾಳ । ಲೇಕೆ
ಕುಂದಿಸಿ ಕೀರ್ತಿ ವೀಚಿಯ ॥ಏಳು ॥೩॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ಎಂದು ಮರುಗುವ ಸಮಯಕಲ್ಲಿಗೆ । ಬಂದು ಶತ್ರುಹನೆಂದ ನಗುತಲಿ।
ಸಂದಸುತರೈತಹರೆ ಚಿಂತಿಸ । ದಿಂದು ನೀನು ॥೧॥ ಸಂಧಿಗೊಲಿದೆನ್ನಯ
ಮಖಾಶ್ವವ । ತಂದು ಕೊಡು ಕಾಣಿಕೆಯು ಸಹಿತಲಿ । ಮುಂದೆ ಸುಖ
ವಹುದಳುಕದೆದ್ದೇಳೆಂದ ನಾಗ ॥೨॥ ಬತ್ತಿದಾದು ಶೋಕಾಗ್ನಿ ಕಾರ್ಬೊಗೆ
ಹೊತ್ತಿ ಕಮರಿದುದುರದಿ ವಿಲಯದ । ಮೃತ್ಯುವೆನಲುರಿದೆದ್ದು ನೃಪ
ವರ।ಶತ್ರುಹಂಗೆ ॥೩॥ ಚುಚ್ಚು ನುಡಿಗಳ ಮುಚ್ಚುಯನ್ನಯ । ಚೊಚ್ಚ
ಲಣುಗನ ನೆಚ್ಚು ಕೆಡೆದಿಹ । ತುಚ್ಛರನಿಬರ ಕೊಚ್ಚವಳಿವುದೆ । ಕಿಚ್ಚು
ತನಗೆ ॥೪॥ ಸಂಧಿಯೇ ತನಗಿನ್ನು ಮರಣದ । ಸಂಧಿ ನಿನಗೆಂದೆನುತ
ರೌದ್ರದಿ । ಸಂಧಿಸಿದ ಸುರಿ ಶರವನುಲಿದುವ । ಸುಂಧರೇಶ ॥೫॥

ಭಾಮಿನಿ

ಬಾಣಹತಿಯಲಿ ಮೈಮರೆದುಗೀ। ರ್ವಾಣ ವಂದಿತನನುಜ ನುರುಳಲು।
ದಾನವೇಂದ್ರ ವಿಭೀಷಣನು ರಿಪು ತಾಣಭೀಷಣನು ॥ತಾನರಿತನಿದ ಲಂಕೆ
ಯಲಿ ಸು । ತ್ರಾಣ ಕೌಣಪ ಬಲವ ಕೂಡುತ । ಬಾನು ಮಾರ್ಗದಿ
ಬಂದೆರಗಿ ರಾಮಾನುಜನ ಪದಕೆ ॥೧॥

ರಾಗ ಭೈರವಿ ಏಕತಾಳ

ಕೊಡುನೇಮವ ಶತ್ರುಘ್ನ । ಜಗ । ದೊಡೆಯನ ಕಾರ್ಯಕೆ ವಿಘ್ನ ॥
ಅಡಚಿದದುರುಳನ ಭಗ್ನ । ಗೈ । ದಿಡದಿರೆ ನಾನು ಕೃತಘ್ನ ॥೧॥ ಜಲ
ಜದಳಾಕ್ಷನ ಕರುಣ । ಇರ । ಲಿಳೆಯೊಳಗೆನಗಾರ್ಗಣ್ಯ ॥ ಕಲಹಕೆ ಬರೆ
ಮುಕ್ಕಣ್ಣ । ಬಿಡೆ। ಖಳನಿಗೆ ಮುಕ್ಕಿಪೆ ಮಣ್ಣ ॥೨॥ ಬಿಡುಚಿಂತೆಯ
ನೆಂದೆನುತ । ಶಿರ । ಪಿಡೆಪದದಲಿ ರಘುಜಾತ ॥ ಕೊಡಲಪ್ಪಣೆ ಪಡೆ
ಸಹಿತ ॥ ನಡೆ । ದೊಡನೆಂದನು ಗರ್ಜಿಸುತ ॥೩॥

ರಾಗ ಭೈರವಿ ಅಷ್ಟತಾಳ

ನೊರಜು ನೃಪಾಲ ಕೇಳು । ಪಾಮರ ನಿನ್ನ । ಮರುಳಾಟವಿದು ಸಾಕೇ
ಳು ॥ ವರ ರಾಮಚಂದ್ರನ । ಧರದ ವಾಜಿಯ ಬಿಟ್ಟು । ಮರೆಹೊಕ್ಕು
ಬದುಕೀಗಳು ॥೧॥ ಮರುಳ ನೀನಾವನು । ಹಂಸಕೆ ಕ್ಷೀರ । ದಿರವನು
ಬೋಧಿಸುವವನು ॥ ವರರಾಮ ಹೃದಯ ಮಂ । ದಿರದೊಳಿರಲು
ಮಿಕ್ಕ । ನೊರಜಿಗಂಜುವೆನೆ ನಾನು ॥೨॥ ತಿಳಿದು ತಿಳಿದು ಹರಿಯ ।

ಕಾರ್ಯಕೆ ವಿಘ್ನ । ಗೊಳಿಪೆಯ ಘಾತಕವರ್ಯ ॥ ಫಲವೆನಿತಿರಲದ ನಿಲಿ
ಸುವೆ ನಾಲಂಕಾ । ತಿಲಕನಾಗಿರುವೆನಯ್ಯ ॥೩॥ ವಸುಧೆಯ ಲೋಭ
ದಿಂದ । ದ್ವೇಷಿಸುತಣ್ಣ । ನಸುಗೊಂಡುಜ್ಜುಗದಿ ಬಂದ ॥ ವಿಷಮ
ಸಂಪದದಿಂದ ಬಸುರಹೊರೆವ ನೀಚ । ಪಿಸುಣಬಗುಳದಿರೆಂದ ॥೪॥
ಜಲಜನಾಭನ ಸತಿಯ।ಶದ್ಧಾ ದಶ।ಗಳನು ಹೊಂದಿದ ಮೃತಿಯ॥ ಖಳನೀ
ಪಾತಕ ಪಡುಕಳಾತಿ ನಾಯುವೆಯೆಂದು। ಇಳುಹಿದ ಶರವೃಷ್ಟಿಯ॥೫॥

ಭಾಮಿನಿ

ಸುರಥ ಲಿಂಗಾನಾಥನಾಥಿತ । ಘುರವೆಸಗುತರೆಯಗಾಮು ಕಡೆಯಲಿ ।
ಉರುವಶಸ್ತ್ರದ ಹತಿದೊಳುರುಳಿದ ಸರಮೆಯೊಲ್ಲಭನು ॥ ಮರಳಿ
ಶಸ್ತ್ರದ ಸಮರಕೊದಗಲು।ಸೆರೆಯ ಹಿಡಿದನು ನೃಪತಿ ಕಂಡಿದ । ಭರಿತ
ರೌದ್ರದೊಳಂಜನಾಸುತ ತರುಬಿ ಗರ್ಜಿಸುತ ॥೧॥

ರಾಗ ನಾದ ನಾಮ ಕ್ರಿಯೆ ಅಷ್ಟತಾಳ

ಬಲವ್ಯೋಭೂಪಾಲ ಸಂಗರದೊಳು । ಎಮ್ಮ । ಬಲವಗೆಲಿದ ಹಮ್ಮ
ಕ್ಷಣದೊಳು ॥ ಇಳಿಸದಿದ್ದರೆ ಕಲಿ ಹನುಮನೆ । ಕೊಟ್ಟು । ತಲೆಯುಳು
ಹಿಕೊಎಮ್ಮ ಹಯವನೆ ॥೧॥ ಅಟವಿಚರ ಗೆಲುವೆಯ ಎನ್ನ । ತೆಗೆ ।
ಲಕೋಟಿಯಲ್ಲಿಯ ಕಬ್ಬುಕವಳಿಯ ॥ ತೋಟವ ನರಸು ನಿಸ್ಸಂತರ ।
ಕೋಟಿ । ಕೋಟಿಯ ತಂಪುದೆಮ್ಮ ಬ.ಶರ ॥೨॥ ವನವಲಊಟಿಯ ಗೈದು
ಲಂಕೆಯ । ರಾ । ವಣತನುಜಾದಿಯಸಂಖ್ಯೆಯ ॥ ರಣಪರಾಕ್ರಮರ
ನಿಗ್ರಹಿಸಿದ । ಕೈ । ಗುಣವದನರಿಯೆ ನೀ ಗ್ರಹಿಸಿದ ॥೩॥ ಎನುತಲಿ
ಮರಪೊಂದ ಮುರಿಯುತ್ತ । ಎತ್ತಿ । ಕನಲಿ ಭೂಮೀಶನ ಶಿರಕಿಟ್ಟ ॥

ಜನಪತಿ ಕೆರಳಿ ಕೃಪಾಣದಿ। ಅವ । ಕ್ಷಣದಿ ಖಂಡಿಸುತ ಸುತ್ರಾಣದಿ॥೪॥
ಮರುಳುವಾನರ ಎಮ್ಮ ಧುರದೊಳು । ಗೆಲ । ಲರಿದು ಶ್ರೀ ರಾಮನ
ಭರದೊಳು ॥ ಕರೆಸಿಕೊಂಬುದು ಬದುಕಿರುವಾಶಾ ।ಇಲ್ಲ ।ದಿರೆ ಸೆಣಸೆ
ಸುತೀಕ್ಷ್ಣನವನೀಶ ॥೫॥

ರಾಗ ಕಾಂಬೋಧಿ ಝಂಪೆತಾಳ

ತೃಣವನರಿಯಲು ಕೊಡಲಿ।ಯನು ಬಳಸಲ್ಯಾಕೆ ಬಿಡ । ಜುಣುಗೊಂದ
ಹೊಸಕುವುಜ್ಜಗಕೆ ॥ ಚಿನುಮಯಾತ್ಮಕ ತಾನೆ ಬರಬೇಕೆ ನಿಜಶರಣ ।
ಹನುಮಗಿದಿರ್ಯಾರುಂಟು ಜಗದಿ ॥೧॥ ಭಕ್ತಿಯೋರ್ವನಿಗಲ್ಲಾರ್ ಹೊತ್ತ
ಗುತ್ತಿಗೆಯಲ್ಲ । ಶಕ್ತಿಯೆಲ್ಲಿಯು ಮಾರಲಿಲ್ಲ ॥ ಮುಕ್ತಿದಾಯಕ ರಾಮ।
ಭಕ್ತರಲಿ ನಾನೋರ್ವ । ವ್ಯಕ್ತಿಯಿರಲಿಡೆ ಕಲಿಯ ಸೊಲ್ಲ ॥೨॥ ಗಳಹಿ
ಫಲವೇನನಿತು । ಬಲವಿರಲು ಮಾರ್ಮಲೆತು । ಬಲುಹತೋರೆಂದ
ಗರ್ಜಿಸುತ ॥ ಕಲಿಹನುಮ ನೆಗೆವದ್ರಿ । ಯಲಿ ಹೊಡೆಯೆ ಸುರಥಾಖ್ಯ।
ಜಳಕದಿಂದದರ ಖಂಡಿಸುತ ॥೩॥

ರಾಗ ಶಂಕರಾಭರಣ ಮಟ್ಟೆ ತಾಳ

ಮರುಳು ಕಪಿಯೆ ನಮ್ಮ ಸಮರ । ಸರಳವಲ್ಲ ಸಾರಿ ಪೇಳ್ದೆ । ಹರಣ
ದಾಸೆಯಿರಲು ಕರೆಸು। ರಾಮಚಂದ್ರನ ಅರರೆ ರಾಮಭಕ್ತನೆಂದು ।
ಸೊರಹುತವನ ಕಾರ್ಯಕೆಡರ । ತರುವ ದ್ರೋಹಿಗ್ಯಾಕೆ ನೆನಹು ।
ರಾಘವೇಂದ್ರನ ॥೧॥ ಭಕ್ತರಾದವರ ಸಹಜ । ಶಕ್ತಿಮೆರಸಬಾರದೆಂಬ।
ಉಕ್ತಿಯಿಹುದೆ ವರ್ಣ ಧರ್ಮ । ಯುಕ್ತ ಮಾರ್ಗದಿ ॥ ಶಕ್ತಿ ಮೆರೆಸು

ವ್ರದಕೆ ಯುಕ್ತಾ । ಯುಕ್ತವೆಂಬುದಿರುವುದತುಲ । ಶಕ್ತರೆಮ್ಮೊಳಿಳಿವೆ
ದಿಟ ಪ್ರ । ಸಕ್ತ ಯುದ್ಧದಿ ॥೨॥

ಭಾಮಿನಿ

ಎನುತ ಹೆಬ್ಬಂಡೆಯುಲಿ ರಾಯನ । ಘನರಥವನಪ್ಪಳಿಸಿದನು ನೃಪ । ಜುಣುಗಿಕಲ್ಪದ ಕಡಲ ತೆರೆಯೆನೆ ಕಣೆಯ ಮಳೆಗರೆದ ॥ ಕ್ಷಣದಿ ಮಾರುತಿ ಮುರಿದುಬಿತಿಯಲಿ । ಜನಪ ಹರಿವಿಧಿಯ್ಯೆಂದ್ರ ರೌದ್ರಾ । ದ್ಯನಿತು ಶಕ್ತಿಯೊಳಿಡಲು ಗೆಲಿದನು ಹನುಮ ಭುಜಬಲದಿ ॥೧॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ಕಂಡು ಕಿಡಿಕಿಡಿಯಾಗಿ ಕುಂಡಲ। ಮಂಡಲಾಧಿಪನಾಗಿದು ಭುವನೋ । ದ್ದಂಡ ರಾಘವ ನಾಮಮುದ್ರಿತ । ಚಂಡಶರವ ॥೧॥ ಅಜಯ ಕೇಳೀ ಶರದಿ ನಿನ್ನನು । ವಿಜಯ ಪೊಂದದಡಾನು ಸತ್ಯದಿ ॥ ತ್ರಿಜಗವಂದಿತ ರಾಮಚಂದ್ರನ ॥ ಭಜಕನಲ್ಲ ॥೨॥ ಮುರಿದರಗ್ಗಳ ನೀನೆನುತಲಿಡೆ । ಧರಣಿ ಕಂಪಿಸಿತಾಮಹಾಸ್ತ್ರ ದಿ । ಮಿರುಗುತಿಹ ಶ್ರೀರಾಮ ನಾಮ । ಕ್ಷರವ ಕಂಡು ॥೩॥ ಕರವ ಜೋಡಿಸುತೆರಗಿ ಮಾರುತಿ । ಧರಣಿಜಾಪತಿ ವಿಶ್ವವಲಾರುತಿ । ಶರಣು ಶರಣೆನುತಾ ಮಹಾಸ್ತ್ರವ । ನುರಧಿ ಧರಿಸಿ ॥೪॥ ರಾಮರಾಮಾಯೆನುತ ಮೈಮರೆ। ದಾಮರುತ್ಸುತ ನುರು ಳಲಖಿಲರ । ತಾಮುದದಿ ಸಾಗಿಸುತಲಿರೆ ಸೆರೆ, ಗೀಮಹೀಶ ॥೫॥

ಭಾಮಿನಿ

ಅತ್ತ ಸರಯೂ ತಟದಿ ಮುನಿಜನ । ಮೊತ್ತದೊಡನೆಸೆದಿರ್ದ ಮನು

ಕುಲ । ಸತ್ತಮಗೆ ಗುರು ನುಡಿದನರಿತೀ ವರ್ತಮಾನವನು ॥ ಮುಕ್ತಿ ಧನಪ ವಿಮಾನವ್ಯೆತರೆ ಮತ್ತದರ ತಾನದರಿ ಕುಂಡಲ । ಪೃಥ್ವಿಗಿಳಿದನು ರಘುಜನರ್ಬುದ ಮಿತ್ರ ತೇಜದಲಿ ॥೧॥

ರಾಗ ಶಂಕರಾಭರಣ ಅಷ್ಟತಾಳ

ಕಂಡನು। ಕುಂಡಲೇಂದ್ರ ರಾಘವನನು। ಕಂಡನು ॥ಪಲ್ಲ॥ ಕಂಡ ಸುರಥ ರಘುವರನ। ಕೋ । ದಂಡಹಸ್ತನ ಪೀತಾಂಬರನ । ದೇವ । ತಂಡವಂ ದಿತದಾಮೋದರನ ॥ ಬ್ರ । ಹ್ಮಾಂಡನಾಯಕ ವಿಶ್ವಂಭರನ ॥ ಮಾ । ರ್ತಾಂಡ ಕೋಟಿಪ್ರಭಾ । ಮಂಡಲ ವಲಯನ । ರುಂಡಮಾಲನ ಸಖ। ಪುಂಡರಿಕಾಕ್ಷನ ॥ ಕಂಡನು ॥೧॥ ಓ ರಾಮ ಕೌಸಲ್ಯ ಬಾಲ । ಸೀ । ತಾ ರಾಮ ದಶಶಿರಕಾಲ । ಕುಜ । ನಾರಾಮ ಶಿಬಿವನಮಾಲ । ಜಯ। ಶ್ರೀರಾಮ ಸಜ್ಜನಪಾಲ ॥ ಎಂದು । ಮಾಮನೋ ನಿಲಯ ಸುತ್ರಾಮ ವಂದಿತ ಪಾದ । ತಾಮರಸ ದ್ವಂದ್ವ । ಕಾಮಹೀಪತಿ ಬಿದ್ದು ॥ ಕಂಡ ನು ॥೨॥ ಕರವ ಪಿಡಿದು ಹರ್ಷೋತ್ಕರದಿ । ರಘು । ವರನನು ರತ್ನ ವಿಷ್ಟರದಿ ॥ ಕು । ಳ್ಳಿರಿಸಿ ಪೂಜಿಸಿ ಭಕ್ತಿ ಭರದಿ । ಈಂಟಿ । ಚರಣತೀರ್ಥ ವ ಶ್ರದ್ಧಾ ತುರದಿ ॥ ದಿವ್ಯ। ದರುಶನಕೆನುತಲುತ್ತರಿಸಿ ತೆರಡು ಯುಗ। ಬರಿಸಿತಿಂದಿಗೆ ಯೋಗ । ಪರಿಕಿಪೆ ಪದಯುಗ ॥ ಕಂಡನು ॥೩॥ ಧನ್ಯ ಧನ್ಯನು ಸ್ವಾಮಿ ನಾನು । ಮಿಗೆ । ಧನ್ಯರು ಪಿತೃಗಳಿನ್ನೇನು । ಕಂಡು। ಧನ್ಯವು ಕುಲಕೋಟಿ ತಾನು । ಮಹಾ । ಧನ್ಯ ಪ್ರಜಾವರ್ಗವಿನ್ನು ॥ ಧನ್ಯವಾಯಿತು ಬಾಳು ಧನ್ಯವಾಯಿತು ಬೀಳು । ಧನ್ಯವಖಿಲವೆಂದು ಧನ್ಯ ಪಾದವನಪ್ಪಿ ॥ ಕಂಡನು ॥೪॥ ಚರಣ ಸಂದರ್ಶನಕಾಗಿ । ಯಜ್ಞ । ಹರಿಯ ಕಟ್ಟಿದೆ ಹೊರತಾಗಿ ॥ ವೈರ । ವಿರದು ಶತ್ರುಹಗೆ ಲೇಸಾಗಿ । ನಿನ್ನ । ಕರೆಸೆಂದಡವ ಬಿರುಸಾಗಿ । ತಿರ । ಸ್ಕರಿಸಿದನದರಿಂದ ॥ ಧುರ

ದೊಳನಾಹುತ || ಜರುಗಿತಾವರು ದೋಷ । ವಿರೆ ಮನ್ನಿಸುವುದೆಂದು||
ಕಂಡನು ||೫||

ಭಾಮಿನಿ

ಎನುತ ಬಂಧಿತ ಭಟರ ಪಾರುವ । ವನು ತರಿಸಿ ಕಾಣಿಕೆಗೆ ತನಗಿ । ದ್ದನಿತು ಸಂಪದ ಸಹಿತ ಮೇಣೊಡೆತನದ ಮುದ್ರಿಕೆಯ || ಚಿನುಮಯಾತ್ಮಕ ನಡಿಯೊಳರ್ಪಿಸಿ । ಮಣಿದು ಪೇಳಿದ ದೇವ ತಪವದ । ವನಜ ಸೇವಾ ಭಾಗ್ಯವನು ತನಗನು ಗ್ರಹಿಪುದೆಂದು ||೧||

ಕಂದಪದ್ಯ

ಇಂತಡಿಗುರುಳಿದು ನುತಿಪನ ।ತಾಕೆಂತಳುವದೆ ತೆಗೆದೆತ್ತಿ ಮಹಾಂತಕರುಣದಿಂ || ಸಂತಸದಿಂ ಮೈದಡವುತ । ಕಂತು ವಿನಯ್ಯಂ ನಸು ನಗುತಿಂತವಗೆಂದಂ ||೧||

ರಾಗ ಸಾವೇರಿ ಆದಿತಾಳ

ಆಹಹಾ ಮೆಚ್ಚಿದೆ ಸ್ತುತಿಗೆ । ಭೂಪತಿ ವಹ । ವಹವ ಹೆಚ್ಚಿನ ಕೃತಿಗೆ|| ಪಲ್ಲ || ಆಹಹ ನಿನ್ನಯ ಭಕ್ತಿ । ಮಹಿಯೊಳಗ್ಗಳ ಶಕ್ತಿ || ಸಹನ ಸದ್ಗುಣಗಣ । ಮಹಿಮೆಗಾನೀ ದಿನ । ಅಹಹ || ಅ.ಪ. || ಭೋಗ ಭಾಗ್ಯೋತ್ಕರದ । ರಾಗದ್ವೇಷ । ದಾಗಾರ ಸಂಸಾರದ || ಸಾಗರದೊಳಗಿರು । ವಾಗಲೂ ಭವದೀಯ || ನೀಗಿದೊಳ್ಳಿದ ಧ್ಯಾನ। ಯೋಗಿಯಾಗಿಹೆಯಯ್ಯ || ಅಹಹ ||೧|| ನಿರತ ಧ್ಯಾನದ ಬಲದಿ । ಆದರ್ಶನಾದೆ ।

ಧರೆಗಾ ಪುಣ್ಯದ ಫಲದಿ || ವರಹರಿ ಸಾಯುಜ್ಯ । ಪರತರ ಪದವಿಗೆ । ತೆರಳುವೆ ಲೇಸಾಗಿ । ಪರಿವಾರ ಸಹಿತಾಗಿ || ಅಹಹ ||೨|| ಮರಳಿಸಿದೆನು ನಿನ್ನಯ । ರಾಜ್ಯವ ಪಿರಿ।ತರಳಗೀಯು ತಲಿನ್ನಯ || ತುರಗದ ಜೊತೆಯಲಿ । ಪರಿವಾರ ಸಹಿತಲಿ । ತ್ವರಿತದಿಬಹುದೆಂದು । ವರರಘೂದ್ವಹನಂದು || ಅಹಹ ||೩||

ಭಾಮಿನಿ

ಕರೆದು ಶತ್ರುಹಮುಖ್ಯರನು ಸ ।ತ್ಕರುಣದಿಂ ಮನ್ನಿಸಿ ರಘೂದ್ವಹ । ಪೊರಟನಿತ್ತಲು ಸುರಥನೃಪರ ಭರತನವರಜನ || ಹರುಷಮಿಗಿಲು ಪಚರಿಸಿ ಪೆಟ್ಯವ । ವರಸದರ್ಶನಗಿತ್ತು ತನ್ನಯೇ ಭರಿತಸೇನಾಜಾಲ ಸಹ ಜೊತೆವೆರೆಯೆರಿಪುಹನು ||೧||

ವಾರ್ಧಿಕ

ಪಡುವಣರಸರ ಗೆಲಿದು ಪಡೆಸಹಿತಲುತ್ತರಕೆ । ನಡೆಯೆ ಗಂಗಾತಟದಿ ಪೊಡವಿಜಾನಂದನರ್ । ತಡೆದು ವಾಜಿಯುಬಲವ ಕಡಹೆ ರಾಘವನ್ಯೆದಿ। ಮಡದಿಸಹಿತತ್ಮಾಜರನು || ಒಡಗೂಡಿ ಯಜ್ಞಮಂ ಕಡೆಗಾಣಿಸಿದ ಸುರಥ । ಪೊಡವಿಪತಿ ಕೈವಲ್ಯಕಡರಿದಂ ಈ ಕಥೆಯು । ನುಡಿದ ಕೇಳಿದರಿಂಗೆ ಜಡಜಾಕ್ಷ ಸದ್ಗತಿಯು । ಕೊಡುವನೆಂದಂ ಫಣಿಪನು ||೧||

ರಾಗ ಸೌರಾಷ್ಟ್ರ ತ್ರಿವುಡೆತಾಳ

ಇಳೆಗಧಿಕಗೋಕರ್ಣ ಮಹ ಮಂ ।ಡಲದ ಸಿದ್ದಾಪುರದೊಳಿಹವೂರ್ ।

ಬೆಳಸಲಿಗೆ ಗಣನಾಥಬುಧ ವಿ । ಠ್ಠಲ ತನೆಯನು ॥೧॥ ಎಸೆವಶಾಲಿವ ಹಾಬ್ದ ವರ್ಷಾ।ದಶಶತಕದೇಕಾಧಿಕಾಶೀತಿ ॥ ಎಸೆವತಿಥಿ ಶ್ರೀಪಾಮ ನವ ಮಿಗೆ। ಬೆಸುಗೆಯಾಗಿ॥೨॥ ರಚಿತದ್ವಿದ್ವರ್ಯ್ಯಯ ಕೃತಿಯಾ ವಿದ್ವ।ಗ್ನಿಚಯ ತಪ್ಪಿರೆ ತಿದ್ದಿ ಲೋಕದಿ । ಪ್ರಚುರಪಡಿಸುವುದೆನುತ ನಂಬಿಹೆ । ನಚಲ ಮನದಿ ॥೩॥

ಮಂಗಲಪದ

ರಾಗ ಧವಳಾರ ಏಕತಾಳ

ಮಂಗಲಂ । ಶುಭ । ಮಂಗಲಂ । ನಿತ್ಯ ॥ ಪಲ್ಲ ॥ ಮಂಗಲ ಕೌಸಲ್ಯಾ ಸುತಗೆ । ಮಂಗಲ ಮುನಿಕ್ರತು ಪೋಷಕಗೆ । ಮಂಗಲ ಕಾರ್ಮುಕ ಭಂಜಕಗವನಿಯ । ನಂದನೆಯಾಳಿದ ರಾಘವನಿಗೆ ॥ ಮಂಗಲಂ ॥೧॥ ಮಂಗಲ ವನಸಂಚಾರನಿಗೆ। ಮಂಗಲಮಯ ಬಿಡುದಾರನಿಗೆ। ಮಂಗಲ ದೈತ್ಯವಿರಾಮಗೆ ಜಯ ಜಯ । ಮಂಗಲ ದಶರಥ ರಾಮನಿಗೆ । ಮಂಗಲ ॥೨॥ ಮಂಗಲ ವಿಘ್ನವಿದಾರಕಗೆ । ಮಂಗಲ ಸುಜನೋದ್ಧಾರಕಗೆ। ಮಂಗಲ ಕಪಿಲಪುರೇಶಗೆ ಜಯ । ಜಯ ಮಂಗಲಮೂರ್ತಿ ಗಣೇಶನಿಗೆ ॥ ಮಂಗಲಂ ॥೩॥



ದಿ. ಬೆಳಸಲಿಗೆ ಗಣಪತಿ ಹೆಗಡೆ (೧೯೧೩-೧೯೯೮)
ಯವರು ಯಕ್ಷಗಾನದ ಎಲ್ಲ ರಂಗಗಳಲ್ಲಿ
ಪರಿಣತಿಯನ್ನು ಹೊಂದಿದ್ದವರು.
ಬೆಳಸಲಿಗೆಯವರ ಕವಿತ್ವ ಶಕ್ತಿಯು
ಶ್ರೇಷ್ಠ ಮಟ್ಟದ್ದು. ಯಕ್ಷಗಾನದ ಸಾರ್ವಕಾಲಿಕ
ಶ್ರೇಷ್ಠ ಕವಿಗಳ ಪಂಕ್ತಿಗೆ ಸೇರಲು ಅರ್ಹರು.
ಅವರು ಉತ್ತಮವಾದ ಇಪ್ಪತ್ತಾರು
ಯಕ್ಷಗಾನ ಪ್ರಸಂಗಗಳನ್ನು ರಚಿಸಿದ್ದಾರೆ.

ದಿ|| ಬೆಳಸಲಿಗೆ ಗಣಪತಿ ಹೆಗಡೆ ಕೃತಿ ಪ್ರಕಾಶನ
ಸಿದ್ದಾಪುರ (ಉ.ಕ.) ಕರ್ನಾಟಕ.